# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಅಕ್ಟೋಬರ್ 16, 2024

ಸಂಪುಟ : 51 ಸಂಚಿಕೆ : 153 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ದಾವಣಗೆರೆಯಲ್ಲಿ ಬಿಡಿಎ ಮಾದರಿ ಮನೆ ನಿರ್ಮಾಣ



ದಾವಣಗೆರೆ, ಅ. 15- ಮಧ್ಯಮ ವರ್ಗದವರ ಅನುಕೂಲಕ್ಕಾಗಿ ಬೆಂಗಳೂರಿನ ಬಿಡಿಎ ಮಾದರಿಯಲ್ಲಿ ಮನೆಗಳ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಸೂಚಿಸಿದರು.

ದಾವಣಗೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಮ್ಮಿಕೊಂಡಿದ್ದ ಸಭೆಯ ನಂತರ ಸಚಿವರು ಮಾಧ್ಯಮದವರಿಗೆ ಮಾಹಿತಿ ನೀಡಿದರು.

ದಾವಣಗೆರೆ, ಹರಿಹರ ನಗರ ಸೇರಿದಂತೆ ಜಿಲ್ಲೆಯ ಎಲ್ಲಾ ಭಾಗಗಳು ಅಭಿವೃದ್ಧಿಯತ್ತ ಸಾಗಬೇಕು. ಈ ನಿಟ್ಟಿನಲ್ಲಿ ಮುಂದಿನ ಪ್ರಕ್ರಿಯೆಗೆ ಸಭೆ ನಡೆಸಲಾಯಿತು. ಏರಿಯಾಗಳ ಆಧಾರದಲ್ಲಿ ದರ ನಿಗಧಿ ಪಡಿಸಿ ಡೆವಲಪ್‌ಮೆಂಟ್ ಅಥಾರಿಟಿಯಿಂದ ಹೊಸ ಲೇಔಟ್, ನಿವೇಶನ ಹಾಗೂ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.

ದಾವಣಗೆರೆ ದಕ್ಷಿಣ ಹಾಗೂ ಉತ್ತರ ಭಾಗಗಳಲ್ಲಿ ಹೊಸ ಲೇಔಟ್‌ಗಳು ನಿರ್ಮಾಣವಾಗಿವೆ. ಪಾರದರ್ಶಕವಾಗಿ (2ನೇ ಪುಟಕ್ಕೆ)

# ಮಿನಿ ಸಮರಕ್ಕೆ ದಿನ ನಿಗದಿ

### ನ.13ಕ್ಕೆ ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ಕ್ಷೇತ್ರಗಳಿಗೆ ಚುನಾವಣೆ

ಬೆಂಗಳೂರು, ಅ. 15 - ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಈ. ತುಕಾರಾಮ್ ಲೋಕಸಭೆಗೆ ಆಯ್ಕೆಗೊಂಡ ಹಿನ್ನೆಲೆಯಲ್ಲಿ ಅವರಿಂದ ತೆರವಾಗಿರುವ ಚನ್ನಪಟ್ಟಣ, ಶಿಗ್ಗಾಂವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ನವೆಂಬರ್ 13 ರಂದು ಚುನಾವಣೆ ಜರುಗಲಿದೆ.

ಮಹಾರಾಷ್ಟ್ರ ಹಾಗೂ ಜಾರ್ಖಂಡ್ ವಿಧಾನಸಭೆ ಚುನಾವಣೆಗಳ ಜೊತೆ ರಾಷ್ಟ್ರದ ವಿವಿಧೆಡೆ ತೆರವಾಗಿರುವ 43 ವಿಧಾನಸಭಾ ಕ್ಷೇತ್ರಗಳಿಗೆ ಕೇಂದ್ರ ಚುನಾವಣಾ ಆಯೋಗ ದೆಹಲಿಯಲ್ಲಿಂದು ವೇಳಾಪಟ್ಟಿ ಪ್ರಕಟಿಸಿದೆ.

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನವೆಂಬರ್ 13 ರಂದು ಚುನಾವಣೆ ನಡೆದರೂ, ಫಲಿತಾಂಶಕ್ಕಾಗಿ ನವೆಂಬರ್ 23 ರವರೆಗೂ ಕಾಯಬೇಕಾಗಿದೆ. ಈ ಕ್ಷೇತ್ರಗಳಿಗೆ ಅಕ್ಟೋಬರ್ 18 ರಂದು ಅಧಿಸೂಚನೆ ಹೊರಡಲಿದ್ದು, ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಳ್ಳಲಿದೆ.

ನಾಮಪತ್ರ ಸಲ್ಲಿಕೆಗೆ ಅಕ್ಟೋಬರ್ 25 ಕಡೇ ದಿನವಾಗಿದ್ದು, 28 ರಂದು ನಾಮಪತ್ರ (4ನೇ ಪುಟಕ್ಕೆ)

## ಮಹಾರಾಷ್ಟ್ರ ವಿಧಾನಸಭೆಗೆ ನ.20ರಂದು ಚುನಾವಣೆ

ನವದೆಹಲಿ, ಅ. 15 - ಮಹಾರಾಷ್ಟ್ರ ವಿಧಾನಸಭೆಗೆ ನವೆಂಬರ್ 20ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಜಾರ್ಖಂಡ್ ವಿಧಾನಸಭೆಗೆ ನವೆಂಬರ್ 13 ಹಾಗೂ 20ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ಪ್ರಕಟಿಸಿದೆ.

**ಜಾರ್ಖಂಡ್‌ಗೆ ನ.13, 20ರಂದು ಚುನಾವಣೆ**

ಎರಡು ರಾಜ್ಯಗಳಿಗೆ ನವೆಂಬರ್ 23 ರಂದು ಮತ ಎಣಿಕೆ ನಡೆಯಲಿದೆ. ಮಹಾರಾಷ್ಟ್ರದಲ್ಲಿ 9.63 ಕೋಟಿ ಅರ್ಹ ಮತದಾರರಿದ್ದಾರೆ.

ಜಾರ್ಖಂಡ್‌ನಲ್ಲಿ 2.6 ಕೋಟಿ ಅರ್ಹ ಮತದಾರರಿದ್ದಾರೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ (4ನೇ ಪುಟಕ್ಕೆ)






## ಮಂಡಳಿ ಪರೀಕ್ಷೆ ಅಧಿಸೂಚನೆ ವಾಪಸ್

ನವದೆಹಲಿ, ಅ. 15 - 5, 8 ಹಾಗೂ 9ನೇ ತರಗತಿಗೆ ಮೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಮಂಡಳಿ ಪರೀಕ್ಷೆ ನಡೆಸುವ ಅಧಿಸೂಚನೆ ವಾಪಸ್ ಪಡೆದಿರುವುದಾಗಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಮಂಡಳಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅನುದಾನ ರಹಿತ ಶಾಲೆಗಳ ಒಕ್ಕೂಟ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ನಂತರ ರಾಜ್ಯ ಸರ್ಕಾರ ಮಂಡಳಿ ಪರೀಕ್ಷೆ ಅಧಿಸೂಚನೆ ವಾಪಸ್ ಪಡೆದಿರುವುದಾಗಿ ತಿಳಿಸಿದೆ.

## ಜಾತಿ ಪ್ರಮಾಣ ಪತ್ರ ಗೊಂದಲ : ಸುತ್ತೋಲೆ

ಬೆಂಗಳೂರು, ಅ. 15 – ಜಾತಿ ಪ್ರಮಾಣ ಪತ್ರದ ಬಗ್ಗೆ ಇರುವ ಗೊಂದಲವನ್ನು ನಿವಾರಿಸಿ, ಸೂಕ್ತ ಸುತ್ತೋಲೆ ಹೊರಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳಿಗೆ ಇಂದಿಲ್ಲಿ ಆದೇಶ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಶಿಷ್ಟ ಪಂಗಡದ ಸಮುದಾಯಗಳ ಸಭೆ ನಡೆಸಲಾಗಿದ್ದು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆಗಿರುವ ಅವ್ಯವಹಾರದ ಹಿನ್ನೆಲೆಯಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಅನುದಾನದ ಕೊರತೆಯಾಗಬಾರದೆಂದು ಕೋರುತ್ತಾ, ಕೆಲವರು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆಯುತ್ತಿರುವುದರ ಬಗ್ಗೆಯೂ ಸಭೆಯ ಗಮನವನ್ನು ಸೆಳೆದಿರುವುದಾಗಿ ತಿಳಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಈ ವರ್ಷದಲ್ಲಿ ನಿಗದಿಪಡಿಸಲಾಗಿರುವ ಅನುದಾನವನ್ನು ಸಂಪೂರ್ಣವಾಗಿ ಒದಗಿಸಲಾಗುವುದು. (3ನೇ ಪುಟಕ್ಕೆ)

## ಯುರೋಪ್ ಮಾದರಿಯಲ್ಲಿ ಪ್ರಮುಖ ವೃತ್ತಗಳ ಅಭಿವೃದ್ಧಿ



ದಾವಣಗೆರೆ, ಅ.15- ನಗರದ ಪ್ರಮುಖ ವೃತ್ತಗಳನ್ನು ಯುರೋಪ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ತಿಳಿಸಿದರು.

ಎಂಸಿಸಿ 'ಬಿ' ಬ್ಲಾಕ್‌ನ ಗುಂಡಿ ಶಾಲೆಯಿಂದ 6 ನೇ ಮೇನ್‌ವರೆಗೂ 3, 4, 5, 6 ನೇ ಕ್ರಾಸ್ ರಸ್ತೆ ಮತ್ತು ಪೇವರ್ಸ್ ಅಳವಡಿಕೆ ಕಾಮಗಾರಿ, ವಿವಿಧ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿ, 11ನೇ ಮೇನ್ 8, 9, 10ನೇ ಕ್ರಾಸ್‌ನಲ್ಲಿರುವ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಡಾ. ಎಂ.ಸಿ. ಮೋದಿ ವೃತ್ತ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ವಿದ್ಯಾರ್ಥಿ ಭವನ, ಶ್ರೀ ಜಯದೇವ ಮುರುಘರಾಜೇಂದ್ರ (4ನೇ ಪುಟಕ್ಕೆ)



# 'ಮಹಾ' ಒಡಕುಗಳ ನಡುವೆ ಚುನಾವಣಾ ಸಮರ

**ದೇಶದ ಎರಡನೇ ಅತಿ ದೊಡ್ಡ ವಿಧಾನಸಭೆಯ ಚುನಾವಣೆಯಲ್ಲಿ ಆರು ಪ್ರಮುಖ ಪಕ್ಷಗಳ ಸೆಣಸಾಟ**

ಮುಂಬೈ, ಅ. 15 - ಮಹಾರಾಷ್ಟ್ರದಲ್ಲಿ ಶಿವಸೇನೆ ಹಾಗೂ ಎನ್.ಸಿ.ಪಿ. ಪಕ್ಷಗಳ ಹಲವಾರು ಪ್ರಮುಖ ನಾಯಕರು ವಿಭಜನೆಯಾಗಿರುವುದು, ಮರಾಠ ಮೀಸಲಾತಿ ಹಾಗೂ ಪ್ರತಿಪಕ್ಷಗಳ ಗೆಲುವಿನ ವಿಶ್ವಾಸದ ನಡುವೆ ರಾಜ್ಯ ವಿಧಾನಸಭಾ ಚುನಾವಣೆ ಸಾಕಷ್ಟು ಪ್ರಾಮುಖ್ಯತೆ ಪಡೆದುಕೊಂಡಿದೆ.

ಮಹಾರಾಷ್ಟ್ರದಲ್ಲಿ ಕಳೆದ ವಿಧಾನಸಭಾ ಚುನಾವಣೆಯ ನಂತರ ಸಾಕಷ್ಟು ನಾಟಕೀಯ ಬೆಳವಣಿಗೆಗಳಾಗಿವೆ.

ಉತ್ತರ ಪ್ರದೇಶ 403 ಶಾಸಕರನ್ನು ಹೊಂದಿದ್ದು, ಅದರ ನಂತರ ಮಹಾರಾಷ್ಟ್ರ ಅತಿ ಹೆಚ್ಚಿನ 288 ಶಾಸಕರನ್ನು ಹೊಂದಿದೆ. ನವೆಂಬರ್ 20ರಂದು ಒಂದೇ ಹಂತದಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ನವೆಂಬರ್ 23ರಂದು ಫಲಿತಾಂಶ ಪ್ರಕಟವಾಗಲಿದೆ.

ಬಡ ಮಹಿಳೆಯರಿಗೆ ಪ್ರತಿ ತಿಂಗಳು 1,500 ರೂ. ನೀಡುವ ಯೋಜನೆಯನ್ನು ಮುಖ್ಯಮಂತ್ರಿ ಏಕನಾಥ ಶಿಂಧೆ ಜಾರಿಗೆ ತಂದಿದ್ದಾರೆ. ಲೋಕಸಭಾ ಚುನಾವಣೆ ಹಿನ್ನಡೆ ನಂತರ ಈ ಕ್ರಮ ತೆಗೆದುಕೊಳ್ಳಲಾಗಿತ್ತು. ವರ್ಷಕ್ಕೆ 46 ಸಾವಿರ ಕೋಟಿ ರೂ. ವೆಚ್ಚದ ಈ ಯೋಜನೆ ತನಗೆ ನೆರವಾಗಲಿದೆ ಎಂದು ಆಡಳಿತಾರೂಢ ಮಹಾಯುತಿ ಮೈತ್ರಿಕೂಟ ಭಾವಿಸಿದೆ.

ಆಡಳಿತಾರೂಢ ಮೈತ್ರಿಕೂಟದಲ್ಲಿ ಬಿಜೆಪಿ, ಶಿಂಧೆ ನೇತೃತ್ವದ ಶಿವಸೇನೆ ಬಣ ಹಾಗೂ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್.ಸಿ.ಪಿ. ಬಣ ಇವೆ. ಎನ್.ಸಿ.ಪಿ. ಬಣ ಕಳೆದ ವರ್ಷವಷ್ಟೇ ಮೈತ್ರಿಕೂಟಕ್ಕೆ ಸೇರ್ಪಡೆಯಾಗಿತ್ತು.

ಮಹಾರಾಷ್ಟ್ರದಲ್ಲಿ ಮಹಾಯುತಿ ಮೈತ್ರಿಕೂಟ ಹಾಗೂ ಮಹಾ ವಿಕಾಸ್ ಅಗಾಡಿ (ಎಂ.ವಿ.ಎ.) ಮೈತ್ರಿಕೂಟಗಳ ನಡುವೆ ನೇರ ಸ್ಪರ್ಧೆ ಇದೆ. ಕಳೆದ ಐದು ವರ್ಷಗಳಲ್ಲಿ ಪ್ರಮುಖ ಪಕ್ಷಗಳಲ್ಲಿ ಒಡಕುಗಳಾಗಿವೆ. ಭಾರೀ ಪ್ರಮಾಣದ ರಾಜಕೀಯ ಧ್ರುವೀಕರಣ ನಡೆದಿದೆ.

ಪ್ರತಿಪಕ್ಷಗಳ ಎಂವಿಎ ಮೈತ್ರಿಕೂಟದಲ್ಲಿ ಕಾಂಗ್ರೆಸ್ ಶಿವಸೇನೆ - ಯುಬಿಟಿ ಹಾಗೂ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಬಣಗಳಿವೆ. ಎಂ.ವಿ.ಎ. ಹಾಗೂ ಮಹಾಯುತಿ ಎರಡೂ ಇನ್ನೂ ಸೀಟು ಹಂಚಿಕೆಯ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಂಡಿಲ್ಲ. 2022 ರಲ್ಲಿ ಶಿವಸೇನೆ ಒಡೆದಿತ್ತು. ಇದಾದ ಒಂದು ವರ್ಷದ ನಂತರ ಎನ್.ಸಿ.ಪಿ.ಯಲ್ಲಿ ಒಡಕುಂಟಾಗಿತ್ತು. ಈ ಬೆಳವಣಿಗೆಗಳ ನಡುವೆ ನಡೆದ ಲೋಕಸಭಾ ಚುನಾವಣೆಯಲ್ಲಿ ಆಡಳಿತಾರೂಢ ಮೈತ್ರಿಕೂಟ ಭಾರೀ ಹಿನ್ನಡೆ ಕಂಡಿತ್ತು. 48 ಕ್ಷೇತ್ರಗಳ ಪೈಕಿ 17ರಲ್ಲಿ ಮಾತ್ರ ಗೆಲ್ಲಲು ಸಾಧ್ಯವಾಗಿತ್ತು. ವಿಪಕ್ಷಗಳ ಎಂ.ವಿ.ಎ. ಮೈತ್ರಿಕೂಟ 30 ಸ್ಥಾನಗಳಲ್ಲಿ ಗೆದ್ದಿತ್ತು. ಆದರೆ, ವಿಧಾನಸಭಾ ಚುನಾವಣೆ ಹೊಸ ಸವಾಲಾಗಿದೆ. ರಾಜ್ಯ ಹಾಗೂ ಸ್ಥಳೀಯ ಮಟ್ಟದಲ್ಲಿನ ವಿಷಯಗಳು ಪ್ರಾಮುಖ್ಯತೆ ಪಡೆಯಲಿವೆ.

ಈ ಬಾರಿಯ ಚುನಾವಣೆಯಲ್ಲಿ ಆರು ಪ್ರಮುಖ ಪಕ್ಷಗಳು ಕಣದಲ್ಲಿವೆ. ಬಿಜೆಪಿ, ಶಿವಸೇನೆ, ಎನ್.ಸಿ.ಪಿ., ಕಾಂಗ್ರೆಸ್, ಶಿವಸೇನೆ - ಯುಬಿಟಿ ಹಾಗೂ ಎನ್.ಸಿ.ಪಿ. - ಎಸ್.ಪಿ. ಪಕ್ಷಗಳು ಸೆಣಸಾಟ ನಡೆಸಲಿವೆ. ಮಹಾರಾಷ್ಟ್ರ ಚುನಾವಣೆಯಲ್ಲಿ ಇಷ್ಟೊಂದು ಒಡಕು ಎಂದೂ ಕಂಡು ಬಂದಿರಲಿಲ್ಲ.

2019ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಶಿವಸೇನೆ ಮೈತ್ರಿ ಮಾಡಿಕೊಂಡಿದ್ದವು. ಆದರೆ ಮುಖ್ಯಮಂತ್ರಿ ಗಾದಿಗೆ ಸಂಬಂಧಿಸಿದಂತೆ ಒಮ್ಮತಕ್ಕೆ ಬರಲು ಸಾಧ್ಯವಾಗಲಿಲ್ಲ. ಮೈತ್ರಿಯಿಂದ ಹೊರ ಬಂದಿದ್ದ ಶಿವಸೇನೆ, ಕಾಂಗ್ರೆಸ್ ಹಾಗೂ ಎನ್.ಸಿ.ಪಿ. ಜೊತೆ ಕೈ ಜೋಡಿಸಿತ್ತು. ನಂತರ ಉದ್ಧವ್ ಠಾಕ್ರೆ ಮುಖ್ಯಮಂತ್ರಿಯಾಗಿದ್ದರು. ನಂತರ ನಡೆದ ಬೆಳವಣಿಗೆಯಲ್ಲಿ ಶಿವಸೇನೆಯಲ್ಲಿ ಒಡಕಾಗಿ, ಏಕನಾಥ ಶಿಂಧೆ ಮುಖ್ಯಮಂತ್ರಿ ಗಾದಿಗೆ ಬಂದಿದ್ದರು.

# ಸತ್ಯಾಗ್ರಹ ಬೆಂಬಲಿಸಿ ವೈದ್ಯರ ಪ್ರತಿಭಟನೆ




**ಹರಪನಹಳ್ಳಿ**

ಹರಪನಹಳ್ಳಿ, ಅ.15- ಪಶ್ಚಿಮ ಬಂಗಾಳದ ಯುವ ವೈದ್ಯರು ನಡೆಸುತ್ತಿರುವ ಸತ್ಯಾಗ್ರಹ ಬೆಂಬಲಿಸಿ, ನ್ಯಾಯ ಸಮ್ಮತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪಟ್ಟಣದ ವೈದ್ಯರು ಪ್ರತಿಭಟನೆ ನಡೆಸಿ ಉಪವಿಭಾಗಾಧಿ ಕಾರಿಗೆ ಮನವಿ ಸಲ್ಲಿಸಿದರು.

ನಗರದ ಐ.ಎಂ.ಎ ಘಟಕ, ಆಯುಷ್ ಘಟಕ, ಐ.ಡಿ.ಎ ಘಟಕ ಸಂಯುಕ್ತವಾಗಿ ಈ ಪ್ರತಿಭಟನೆ ಹಮ್ಮಿಕೊಂಡಿದ್ದವು.

ಈ ವೇಳೆ ಡಾ.ಮಹೇಶ್ ಮಾತನಾಡಿ, ಕಳೆದ 12 ದಿನಗಳಿಂದ ಪಶ್ಚಿಮ ಬಂಗಾಳದ ಯುವ ವೈದ್ಯರು ತಮ್ಮ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದಾರೆ. ಇತ್ತೀಚೆಗೆ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಬರ್ಬರ ಅತ್ಯಾಚಾರಕ್ಕೀಡಾಗಿ ಸಾವಿಗೀಡಾದ ಯುವ ವೈದ್ಯೆಗೆ ನ್ಯಾಯ ದೊರಕಿಸುವುದು ಇದರಲ್ಲಿ ಸೇರಿದೆ. ದೇಶದ ಎಲ್ಲಾ ವೈದ್ಯರು ಹಾಗೂ ರಾಜ್ಯದ ಐ.ಎಂ.ಎ ಘಟಕಗಳು ಈ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದು, ಈ ಕೂಡಲೇ ಪಶ್ಚಿಮ ಬಂಗಾಳ ಸರ್ಕಾರವು ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಡಾ.ಹರ್ಷ ಮಾತನಾಡಿ, ವೈದ್ಯರು ನಡೆಸುತ್ತಿರುವ ಆಮರಣಾಂತ ಉಪವಾಸ ಸತ್ಯಾಗ್ರಹ ನಿರತ ವೈದ್ಯರಲ್ಲಿ ಮತ್ತಿಬ್ಬರ ಆರೋಗ್ಯ ಹದಗೆಟ್ಟಿದೆ. ಹಾಗಾಗಿ ಕೊಲೆಯಾದ ತಮ್ಮ ಸಹೋದ್ಯೋಗಿಗೆ ನ್ಯಾಯ ದೊರಕಿಸಿಕೊಡಬೇಕು ಹಾಗೂ ಆರೋಗ್ಯ ಕಾರ್ಯದರ್ಶಿ ಎನ್.ಎಸ್ ನಿಗಮ್ ಅವರನ್ನು ಕೂಡಲೇ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಡಾ.ಕೆ.ಎಂ.ಖಾನ್, ಡಾ.ಕೆ.ಎಂ.ಮಂಜುನಾಥ, ಡಾ.ರಘು ಅಧಿಕಾರ್, ಡಾ.ಜಯಶ್ರೀ ಪಟೇಲ್. ಡಾ.ನಂದೀಶ, ಡಾ.ಸಂಗೀತಾ, ಡಾ.ಸೀಮಾ ಅಧಿಕಾರ್, ಡಾ.ಇಂದ್ರೇಶ್, ಡಾ.ಆನಂದಗೌಡ, ಡಾ.ಹರ್ಷ ಕಟ್ಟಿ, ಡಾ.ಅಂಬಿಕಾ, ಡಾ.ಕೊಟ್ರೇಶ, ಡಾ.ವಿಶ್ವಾರಾಧ್ಯ, ಡಾ.ಶೇಕ್ ನಫ್ತರ್, ಡಾ.ಪ್ರಶಾಂತ, ಡಾ.ಗಫೂರ್, ಡಾ.ನೂರ್ ಸೇರಿದಂತೆ ಇತರರು ಇದ್ದರು.

## ಮುಸ್ಲಿಂ ಧರ್ಮಗುರುಗಳ ಪ್ರತಿಭಟನೆ



**ಹರಿಹರ**

ಹರಿಹರ, ಅ.15- ಮುಸ್ಲಿಂ ಸಮುದಾಯದ ಭಾವನೆಗಳಿಗೆ ಧಕ್ಕೆ ಆಗುವಂತಹ ಭಾಷಣ ಮಾಡಿರುವ ಉತ್ತರ ಪ್ರದೇಶದ ಗೌಜಿಯಾಬಾದ್ ನಿವಾಸಿ ಯತಿ ನರಸಿಂಗಾನಂದ ಮಹಾರಾಜರ ವಿರುದ್ಧ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ನಗರದ ಅಂಜುಮನ್ ಇಸ್ಲಾಮಿಯಾ ಸಮಿತಿ ವತಿಯಿಂದ ಪ್ರತಿಭಟನೆ ಮಾಡಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಮುಸ್ಲಿಂ ಧರ್ಮ ಗುರುಗಳಾದ ಶಹರ್ ಎ. ಖಾಜಿ ಮೌಲಾನ ಸೈಯದ್ ಶಂಶುದ್ದೀನ್, ಅಂಜುಮನ್ ಇಸ್ಲಾಮಿಯ ಅಧ್ಯಕ್ಷ ಸೈಯದ್ ಎಜಾಜ್, ಸದಸ್ಯರಾದ ಎಂ. ಎಂ. ಬಿ. ಫಾರೂಕ್, ಸೈಯದ್ ಆಸಿಫ್, ಫಯಾಜ್ ಅಹಮದ್, ಆರ್.ಸಿ. ಜಾವಿದ್, ಮುಜಾಮಿಲ್ ಬಿಲ್ಲು, ಮುಖಂಡರಾದ ಜಾಕೀರ್, ರೆಹಮತ್ ಇತರರು ಪಾಲ್ಗೊಂಡಿದ್ದರು.

## 21 ರಿಂದ ಓಶೋ ಧ್ಯಾನ ಶಿಬಿರ

ದಾವಣಗೆರೆ, ಅ. 15- ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಮಾನಸಿಕ ಹಾಗೂ ದೈಹಿಕವಾಗಿ ಮನುಷ್ಯನ ಅಂತರಂಗ ಮತ್ತು ಬಹಿರಂಗ ಧ್ಯಾನ ಸಾಧನೆಗಾಗಿ ಓಶೋರವರು ನಿರೂಪಿಸಿರುವ ಚಿಕಿತ್ಸಕ ಓಶೋ ಧ್ಯಾನ ಶಿಬಿರವನ್ನು ಇದೇ ದಿನಾಂಕ 21 ರಿಂದ 27 ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30 ರವರೆಗೆ ನಗರದ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪುಷ್ಪ (9036719573), ಅರ್ಚನ (9738572318) ತಿಳಿಸಿದ್ದಾರೆ.

## ರೈತರಿಗೆ ತೊಂದರೆಯಾಗದಂತೆ ಅಧಿಕಾರಿಗಳು ಎಚ್ಚರ ವಹಿಸಿ



**ಹರಿಹರ ತಾ.ಪಂ. ಸಾಮಾನ್ಯ ಸಭೆಯಲ್ಲಿ ಇಓ ಎಸ್.ಪಿ. ಸುಮಲತ ನಿರ್ದೇಶನ**

ಹರಿಹರ, ಅ.15- ರೈತರು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಎಚ್ಚರ ವಹಿಸಿ ಕರ್ತವ್ಯ ನಿರ್ವಹಿಸುವಂತೆ ತಾ.ಪಂ. ಇಓ ಎಸ್.ಪಿ. ಸುಮಲತ ತಿಳಿಸಿದರು.

ನಗರದ ತಾಪಂ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ಕೃಷಿ ಮತ್ತು ತೋಟಗಾರಿಕೆ ಇಲಾಖೆ ವತಿಯಿಂದ ರೈತರಿಗೆ ಉಪಯುಕ್ತವಾಗುವಂತಹ ಸರ್ಕಾರದ ಸೌಲಭ್ಯಗಳನ್ನು ಸರಿಯಾದ ಸಮಯದಲ್ಲಿ ತಲುಪಿಸಬೇಕು. ಅಡಿಕೆ ಜೊತೆಗೆ ಇತರೆ ಬೇಳೆಕಾಳುಗಳ ಬೆಳೆಗಳನ್ನು ಬೆಳೆಯುವ ನಿಟ್ಟಿನಲ್ಲಿ ರೈತ ಸಮುದಾಯಕ್ಕೆ ತಿಳಿಸಬೇಕು. ರೈತರಿಗೆ ಬರಗಾಲದ ಸಮಯದಲ್ಲಿ ಆಗಿರುವ ಬೆಳೆಹಾನಿ ಪರಿಹಾರದ ಮೊತ್ತವನ್ನು ಆದಷ್ಟು ಬೇಗನೆ ನೀಡುವುದಕ್ಕೆ ಮುಂದಾಗಬೇಕು. ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ದಾಸ್ತಾನು ಕೊರತೆ ಆಗದಂತೆ ಎಚ್ಚರಿಕೆ ವಹಿಸಬೇಕು.

ಕೃಷಿ ಹೊಂಡಗಳನ್ನು ಹೆಚ್ಚು ನಿರ್ಮಾಣ ಮಾಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಸಭೆಯನ್ನು ಏರ್ಪಡಿಸಿ ಸರ್ಕಾರದ ಯೋಜನೆಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿ, ಅರಿವು ಮೂಡಿಸಬೇಕು ಎಂದು ಹೇಳಿದರು.

ಕೊಕ್ಕನೂರು ಗ್ರಾಮದಲ್ಲಿ ಡಾ. ಅರ್ಶಿತ್ ಎಂಬ ವೈದ್ಯರು ಆಸ್ಪತ್ರೆಯಲ್ಲಿ ಇರುವುದಿಲ್ಲ ಮತ್ತು ಚಿಕಿತ್ಸೆಗೆ ಬರುವ ರೋಗಿಗಳಿಗೆ ಸರಿಯಾದ ರೀತಿಯಲ್ಲಿ ಚಿಕಿತ್ಸೆ ನೀಡುತ್ತಿಲ್ಲ ಎಂದು ಗ್ರಾಮಸ್ಥರು ದೂರು ನೀಡಿದ್ದು, ತಾಲ್ಲೂಕು ಆರೋಗ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಡೆಂಗ್ಯೂ, ಮಲೇರಿಯಾ, ಕ್ಷಯ ರೋಗದಿಂದ ಬಳಲುತ್ತಿರುವವರು ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಮುಂದಾಗಬೇಕು. ತಾಲ್ಲೂಕಿನಲ್ಲಿ ಕಳೆದ ಬಾರಿ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶ ಕಡಿಮೆ ಪ್ರಮಾಣದಲ್ಲಿ ಬಂದಿದ್ದು, ಮಕ್ಕಳಿಗೆ ಕಲಿಕೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ಮೂಡಿಸುವಲ್ಲಿ ಶಿಕ್ಷಣ ಇಲಾಖೆ ಮುಂದಾಗಬೇಕು ಎಂದು ಹೇಳಿದರು.

ಪಶು ಇಲಾಖೆಯ ನೂತನ ಕಟ್ಟಡದ ಕಾಮಗಾರಿಗೆ ಶಾಸಕರು ಗುದ್ದಲಿ ಪೂಜೆ ಸಲ್ಲಿಸಿ, ಆರು ತಿಂಗಳು ಕಳೆದರೂ ಕಾಮಗಾರಿ ಆರಂಭಿಸದೇ ಇರುವುದರಿಂದ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಂಡು, ಕಾಮಗಾರಿಯನ್ನು ಆದಷ್ಟು ಬೇಗ ಪ್ರಾರಂಭಿಸಬೇಕು ಎಂದು ಹೇಳಿದರು.

ಬಿ.ಸಿ.ಎಂ. ಇಲಾಖೆ ಎಇಇ ಆಸ್ಮಾಬಾನು, ಶಿಕ್ಷಣ ಇಲಾಖೆ ಬಿ.ಆರ್.ಸಿ ಕೃಷ್ಣಪ್ಪ, ಸಿಡಿಪಿಓ ಇಲಾಖೆ ಎಇಇ ಪೂರ್ಣಿಮಾ, ಆಸ್ಪತ್ರೆಯ ವೈದ್ಯಾಧಿಕಾರಿ ಡಾ ಹನುಮನಾಯ್ಕ್, ಬೆಸ್ಕಾಂ ಇಲಾಖೆ ಎಇಇ ಮಾರ್ಕಂಡೇಯ, ಅರಣ್ಯ ಇಲಾಖೆ ಎಇಇ ಅಮೃತ, ಆರೋಗ್ಯ ಇಲಾಖೆ ಅಧಿಕಾರಿ ಪ್ರಶಾಂತ್, ಪಶು ಇಲಾಖೆ ಎಇಇ ಸಿದ್ದೇಶ್ ತಮ್ಮ ಇಲಾಖೆಗಳ ಪ್ರಗತಿ ವಿವರಿಸಿದರು.

ಈ ಸಂದರ್ಭದಲ್ಲಿ ಶಾಸಕ ಬಿ.ಪಿ. ಹರೀಶ್, ಜಿಪಂ ಇಲಾಖೆ ಲೆಕ್ಕಾಧಿಕಾರಿ ಎಂ.ಎ. ವೆಂಕಟೇಶ್, ಆಹಾರ ಇಲಾಖೆ ಶಿರಸ್ತೇದಾರ್ ಮಂಜುನಾಥ್, ಕಾರ್ಮಿಕ ಇಲಾಖೆ ಎಇಇ ಕವಿತಾ, ಪಶು ಇಲಾಖೆ ಸಿದ್ದೇಶ್, ತೋಟಗಾರಿಕೆ ಇಲಾಖೆ ಎಇಇ ಶಶಿಧರಯ್ಯ, ಕೆ.ಆರ್.ಡಿ.ಎಲ್ ಇಲಾಖೆ ಸಂಗಮೇಶ್, ಅಕ್ಷರ ದಾಸೋಹ ಇಲಾಖೆ ವೀರೇಶ್, ಸಮಾಜ ಕಲ್ಯಾಣ ಇಲಾಖೆ ಪ್ರಭಾರಿ ಎಇಇ ರಾಮಕೃಷ್ಣಪ್ಪ, ಕೆ.ಎಸ್.ಆರ್.ಟಿ.ಸಿ. ಹನುಮಂತಪ್ಪ, ತಾಪಂ ಕಚೇರಿಯ ಲಿಂಗರಾಜ್, ಸ್ವಪ್ನ, ಸಲಿಂ ಆಹ್ಮದ್, ಮಹೇಶ್, ವಾಸುದೇವ, ಮಹಮ್ಮದ್ ಅಲಿ ಮತ್ತಿತರರು ಹಾಜರಿದ್ದರು.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಸೀಗೆ ಹುಣ್ಣಿಮೆ



ದಾವಣಗೆರೆ, ಅ. 15- ನಗರದ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಸೀಗೆ ಹುಣ್ಣಿಮೆ ಪ್ರಯುಕ್ತ ನಾಡಿದ್ದು ದಿನಾಂಕ 17ರ ಗುರುವಾರ ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಅರ್ಚನ ಮತ್ತು ಶ್ರೀ ತೇಜಸ್ ಹಾಗೂ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ 18ಕ್ಕೆ ಸಾಮೂಹಿಕ ವಿವಾಹ, ದೊಡ್ಡ ಎಡೆ ಜಾತ್ರೆ

ಮಲೇಬೆನ್ನೂರು, ಅ.15- ಇಲ್ಲಿನ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ವಿಜಯದಶಮಿ ಮತ್ತು ಮರಿಬನ್ನಿ ಕಾರ್ಯಕ್ರಮದ ಅಂಗವಾಗಿ ಇದೇ ದಿನಾಂಕ 18 ರ ಶುಕ್ರವಾರ ಸಾಮೂಹಿಕ ವಿವಾಹ ಮತ್ತು ದೊಡ್ಡ ಎಡೆ ಜಾತ್ರೆ ಹಮ್ಮಿಕೊಳ್ಳಲಾಗಿದೆ. ನಾಡಿದ್ದು ದಿನಾಂಕ 17ರ ಗುರುವಾರ ಸಂಜೆ 6 ರಿಂದ 8 ರವರೆಗೆ ಕಾಳಿಕಾ ಹೋಮ ಮತ್ತು ರಾತ್ರಿ 10 ರಿಂದ ಶ್ರೀಸ್ವಾಮಿಯ ಒಡ್ಡೋಲಗವು ಡೊಳ್ಳು, ವೀರಗಾಸೆಯೊಂದಿಗೆ ನಡೆಯಲಿದೆ. ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ವಿವಾಹವಾಗಲಿಚ್ಚಿಸುವವರು ನಾಡಿದ್ದು ದಿನಾಂಕ 17ರೊಳಗಾಗಿ ಬೀರಲಿಂಗೇಶ್ವರ ದೇವಸ್ಥಾನಕ್ಕೆ ಆಗಮಿಸಿ ಹೆಸರು ನೋಂದಾಯಿಸುವಂತೆ ದೇವಸ್ಥಾನದ ಕಾರ್ಯದರ್ಶಿ ಕೆ.ಪಿ. ಗಂಗಾಧರ್ ತಿಳಿಸಿದ್ದಾರೆ.

# ಯುವ ಜನತೆಗೆ ಹಬ್ಬಗಳ ವೈಜ್ಞಾನಿಕ ಆಚರಣೆ ಹಿನ್ನೆಲೆ ತಿಳಿಸಿ



**ರಾಣೇಬೆನ್ನೂರು ನಾಡಹಬ್ಬ ಕಾರ್ಯಕ್ರಮದಲ್ಲಿ ವಸಂತಾ ಹುಲ್ಲತ್ತಿ**

ರಾಣೇಬೆನ್ನೂರು, ಅ.15- ಇಂದಿನ ಯುವ ಜನತೆಗೆ ನಮ್ಮ ಹಬ್ಬಗಳ ವೈಜ್ಞಾನಿಕ ಆಚರಣೆಯ ಹಿನ್ನೆಲೆ ಬಗ್ಗೆ ತಿಳುವಳಿಕೆ ನೀಡುವುದು ಅವಶ್ಯಕವಾಗಿದೆ ಎಂದು ರಾಜ್ಯ ವೀರಶೈವ ಪಂಚಮಸಾಲಿ ಮಹಿಳಾ ಘಟಕದ ಉಪಾಧ್ಯಕ್ಷರಾದ ವಸಂತಾ ಬಿ. ಹುಲ್ಲತ್ತಿ ಹೇಳಿದರು.

ನಗರದ ಕರ್ನಾಟಕ ಸಂಘದಲ್ಲಿ ಜರುಗಿದ 88ನೇ ವರ್ಷದ ನಾಡಹಬ್ಬದ ಎಂಟನೇ ದಿನದ ಸಭಾ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಆಗಮಿಸಿ ಅವರು ಮಾತನಾಡಿದರು.

'ಮನೆ ಗೆದ್ದು ಮಾರು ಗೆಲ್ಲು' ಎಂಬಂತೆ ಸಾಮಾಜಿಕ ಸಂಘಟನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಮಯಕ್ಕೆ ಸರಿಯಾಗಿ ಮನೆಯ ಕೆಲಸಗಳನ್ನು ಪೂರೈಸಿಕೊಂಡು, ಮನೆಯ ಹೊರಗೂ ಕೆಲಸ ಮಾಡಲು ಅಭ್ಯಾಸ ಮಾಡಿಕೊಳ್ಳಿ ಎಂದು ಅವರು ಹೇಳಿದರು.

ಲಯನ್ಸ್ ಸಂಸ್ಥೆಯ ಅಧ್ಯಕ್ಷ ಶಿವಪ್ಪ ಬಿ. ಗುರಿಕಾರ, ಮಿಮಿಕ್ರಿ ಕಲಾವಿದ ರಮೇಶ ಬಾಬು, ಹಾಸ್ಯ ಕಲಾವಿದ ಮಹಾದೇವಪ್ಪ ಸತ್ತಿಗೇರಿ, ಕರ್ನಾಟಕ ಸಂಘದ ಅಧ್ಯಕ್ಷ ಸಂಜೀವ ಶಿರಹಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮದ ನಂತರ ಮೈಸೂರಿನ ಅಂತರರಾಷ್ಟ್ರೀಯ ಖ್ಯಾತಿಯ ಮಿಮಿಕ್ರಿ ಕಲಾವಿದ ರಮೇಶಬಾಬು ಹಾಗೂ ಹುಬ್ಬಳ್ಳಿಯ ಹಾಸ್ಯ ಕಲಾವಿದ ಮಹಾದೇವಪ್ಪ ಸತ್ತೀಗೇರಿ ಅವರು ರಾಜಕಾರಣಿಗಳು, ಚಲನಚಿತ್ರ ನಟರ ಅನುಕರಣೆ, ಹಾಸ್ಯಚಟಾಕಿಗಳು ಹಾಗೂ ವಿವಿಧ ನಟರ ಖ್ಯಾತ ಸಿನೆಮಾ ಹಾಡುಗಳಿಗೆ ವೇದಿಕೆಯಲ್ಲಿಯೇ ಕ್ಷಣಾರ್ಧದಲ್ಲಿಯೇ ಆಯಾ ನಟರ ವೇಷ ಭೂಷಣಗೊಂದಿಗೆ ನೃತ್ಯ ಮಾಡಿದ್ದು ವಿಶೇಷವಾಗಿತ್ತು

ದೇವಾಂಗ ಮಹಿಳಾ ಮಂಡಳಿಯ ಸದಸ್ಯರು ನಾಡಗೀತೆ ಹಾಡಿದರು, ವಿಭಾ ಜೋಶಿ ಸ್ವಾಗತಿಸಿದರು, ಶ್ರೀಮತಿ ನಾಡಿಗೇರ ವಂದಿಸಿದರು, ಶ್ರೀನಿಧಿ ಶಿರಹಟ್ಟಿ ಕಾರ್ಯಕ್ರಮ ನಿರ್ವಹಿಸಿದರು. ವಿನಾಯಕ ಜೋಶಿ, ಸಂದೀಪ ರೂಪನಗುಡಿ, ಸತ್ಯನಾರಾಯಣ ವಿಶ್ವರೂಪ, ಸಂಕಪ್ಪ ಮಾರನಾಳ, ಕೆ. ಎನ್. ಷಣ್ಮುಖ, ಶ್ರೀನಿವಾಸ ಏಕಬೋಟೆ, ಮಹೇಶ ನಾಡಿಗೇರ, ಚಿದಂಬರ ಜೋಶಿ, ಸೀತಾರಾಮ ಕಣೇಕಲ್ ಮೊದಲಾದವರು ಉಪಸ್ಥಿತರಿದ್ದರು.

# ಬಿಡಿಎ ಮಾದರಿಯಲ್ಲಿ ಮನೆಗಳ ನಿರ್ಮಾಣ

(1ನೇ ಪುಟದಿಂದ) ಇ-ಸ್ವತ್ತು ನೀಡಬೇಕು. ಇ-ಸ್ವತ್ತು ಸಹ ಆನ್‌ಲೈನ್ ಮಾಡಲು ನಿರ್ಧರಿಸಲಾಗಿದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ದಾವಣಗೆರೆ ಜಿಲ್ಲೆ ಉತ್ತಮವಾಗಿದೆ.

2003-2008 ರ ಅವಧಿ ಯಲ್ಲಾದ ಕಾಮಗಾರಿಗಳಿಂದ ಇಂದು ದಾವಣಗೆರೆ ಜಿಲ್ಲೆಗೆ ಉತ್ತಮ ಹೆಸರು ಬಂದಿದೆ. ವಿನೋಬನಗರ, ಎಲ್ಲಮ್ಮನಗರ, ಜಾಲಿನಗರ ಸೇರಿದಂತೆ ಹತ್ತಾರು ಬಡಾವಣೆಗಳಿಂದ 40 ಸಾವಿರ ಅರ್ಜಿಗಳನ್ನು ಅಕ್ರಮ-ಸಕ್ರಮ ಮಾಡಲಾಗಿದೆ. ಸಾವಿರಾರು ರೂಪಾಯಿ ಇದ್ದ ಭೂಮಿ ಬೆಲೆ ಕೋಟಿಗೆ ತಲುಪಿದೆ. ನಮ್ಮ ಅವಧಿಯಲ್ಲಾದ ಕೆಲಸಗಳನ್ನು ಜನರು ಇಂದಿಗೂ ಸ್ಮರಿಸುತ್ತಿದ್ದಾರೆ ಎಂದರು.

ಜಿಲ್ಲಾಧಿಕಾರಿ ಡಾ.ಗಂಗಾಧರ ಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಮೇಯರ್ ಕೆ.ಚಮನ್‌ಸಾಬ್, ಉಪಮೇಯರ್ ಸೋಗಿ ಶಾಂತಕುಮಾರ್, ದೂಡಾ ಆಯುಕ್ತರು ಸದಸ್ಯರುಗಳು ಹಾಗೂ ಇತರರು ಉಪಸ್ಥಿತರಿದ್ದರು.

**ಸಿಎಂ ಬದಲಾವಣೆ ಇಲ್ಲ : ಎಸ್ಸೆಸ್ಸೆಂ**

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಶ್ನಿಸಿದ ಮಾಧ್ಯಮದವರಿಗೆ ಸಚಿವರು ಸಿಎಂ ಸಿದ್ದರಾಮಯ್ಯ ಬದಲಾವಣೆ ಇಲ್ಲ. ಈ ಬಗ್ಗೆ ಕ್ಯಾಬಿನೆಟ್ ನಲ್ಲಿ ಚರ್ಚೆ ನಡೆಯಲಿದೆ.

ಯುಬಿಡಿಟಿ ಕಾಲೇಜು ಸೀಟು ಹಂಚಿಕೆ ವಿವಾದದಿಂದ ದಾವಣಗೆರೆ ಬಂದ್ ಕರೆ ವಿಚಾರವನ್ನೂ ಸಹ ಕ್ಯಾಬಿನೆಟ್ ನಲ್ಲಿ ಚರ್ಚಿಸಲಾಗುವುದು ಎಂದು ಸಚಿವರು ತಿಳಿಸಿದರು.


**ಚಿರಸ್ಮರಣೆ**



**ಡಾ.ಬಿ.ಎಂ.ತಿಪ್ಪೇಸ್ವಾಮಿ**, ನೇತ್ರ ತಜ್ಞರು,
ಮಾಜಿ ಶಾಸಕರು, ಭರಮಸಾಗರ
(16.10.1990)

**ಯಲ್ಲಮ್ಮ ಡಾ.ಬಿ.ಎಂ.ತಿಪ್ಪೇಸ್ವಾಮಿ**
(14.10.2003)

ಇವರ ಪುಣ್ಯಸ್ಮರಣೆ.
ಸದಾ ಅಪ್ಪಾಜಿ ಮತ್ತು ಅಮ್ಮನ ನೆನಪಿನಲ್ಲಿ...
**ಮಕ್ಕಳು, ಅಳಿಯಂದಿರು, ಸೊಸೆ ಮತ್ತು ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು**



**ಕೆ. ಎಸ್. ರುದ್ರಪ್ಪ ನಿಧನ**



ದಾವಣಗೆರೆ ಸಿಟಿ ಆಂಜನೇಯ ಬಡಾವಣೆ
16ನೇ ಕ್ರಾಸ್ ವಾಸಿ
**ಶ್ರೀ ಕೆ.ಎಸ್. ರುದ್ರಪ್ಪ (80)**
ಅವರು ದಿನಾಂಕ: 15-10-2024ರ
ಮಂಗಳವಾರ ಸಂಜೆ 6.16ಕ್ಕೆ ನಿಧನರಾದರು.
ಪತ್ನಿ, ಓರ್ವ ಪುತ್ರ, ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ
**ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 16-10-2024ರ ಬುಧವಾರ**
**ಮಧ್ಯಾಹ್ನ 2:30ಕ್ಕೆ ಮೃತರ ಸ್ವಗ್ರಾಮ ತ್ಯಾವಣಿಗೆಯಲ್ಲಿ ನೆರವೇರಿಸಲಾಗುವುದು.**
ದುಃಖತಪ್ತ ಕುಟುಂಬ ವರ್ಗ : ಮೊ. **98449 81354**



**ಮೂರನೇ ವರ್ಷದ ಪುಣ್ಯಸ್ಮರಣೆ**



**ದಿ. ಯಲವಟ್ಟಿ ನೀಲಮ್ಮ**
ನೀವು ನಮ್ಮನ್ನಗಲೀ ಇಂದಿಗೆ ಮೂರು ವರ್ಷಗಳು ಕಳೆದವು.
ಅಮ್ಮ, ಪದಗಳಿಗೆ ನಿಲುಕದ ಚಿಲುಮೆ ನೀನು
ಮೊಮ್ಮಕ್ಕಳ ಪಾಲಿನ ಪ್ರೀತಿಯ ಒಲುಮೆ ನೀನು
ಹಾಲೇಶನ ಪರಮ ಭಕ್ತೆ ನೀನು, ನಮ್ಮ ಮನೆತನದ ಶಕ್ತಿ ನೀನು
ದೇಹದಿಂದ ದೂರವಾಗಿರಬಹುದು. ಆದರೆ,
ನೀನು ಅಂತರಂಗದಲ್ಲಿ ಅಳಿಯದಂತೆ ನೆಲೆಸಿರುವೆ
ನಿಮ್ಮ ನಡೆ-ನುಡಿ ಆದರ್ಶಗಳೇ ನಮ್ಮ ಬಾಳಿನ ಸ್ಪೂರ್ತಿ
ನಿಮ್ಮ ನೆನಪು ನಮ್ಮ ಜೀವನದಲ್ಲಿ ಸದಾ ಹಚ್ಚಹಸಿರಾಗಿದೆ.
ಭಗವಂತನು ಸದಾ ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇವೆ.
ಮರೆಯದ ಸುಂದರ ಕ್ಷಣಗಳು ನೆನಪು ಮಾತ್ರ.
**ಯಲವಟ್ಟಿ ಅಂಕಿತ, ಅಮೃತ, ದಾವಣಗೆರೆ.**


## ಜಗಳೂರಿನಲ್ಲಿ 14 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವ ಸಿದ್ಧತಾ ಸಭೆ



ಜಗಳೂರು, ಅ.15- ಕ್ಷೇತ್ರದ ಶಾಸಕ ಬಿ. ದೇವೇಂದ್ರಪ್ಪ ಅವರ ಉಪಸ್ಥಿತಿಯಲ್ಲಿ ಹಾಗೂ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಾಡಿದ್ದು ದಿನಾಂಕ 17 ರ ಗುರುವಾರ ಅಪರಾಹ್ನ 3 ಘಂಟೆಗೆ ಜಗಳೂರಿನ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಜಗಳೂರಿನಲ್ಲಿ ನಡೆಸಬೇಕೆಂದಿರುವ ಉದ್ದೇಶಿತ ಜಿಲ್ಲಾ 14 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕುರಿತಾಗಿ ಪೂರ್ವ ಸಿದ್ಧತಾ ಸಭೆಯನ್ನು ಕರೆಯಲಾಗಿದೆ.

## ಆಪೆ ಆಟೋ - ಮಜ್ದಾ ವಾಹನ ಡಿಕ್ಕಿ; ಹಲವರಿಗೆ ಗಾಯ



**ಹರಿಹರ**

ಹರಿಹರ, ಅ.15- ನಗರದ ತರಳಬಾಳು ಶಾಲೆ ಮುಂಭಾಗದಲ್ಲಿ ಬೆಳಿಗ್ಗೆ 10 ಗಂಟೆಯ ಸಮಯದಲ್ಲಿ ಆಪೆ ಆಟೋ ಮತ್ತು ಇಟ್ಟಿಗೆ ತುಂಬಿರುವ ಮಜ್ದಾ ವಾಹನಕ್ಕೆ ಡಿಕ್ಕಿ ಸಂಭವಿಸಿದ ಪರಿಣಾಮ ಹಲವರಿಗೆ ಗಾಯಗಳಾಗಿದ್ದು, ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಘಟನೆ ನಡೆದಿದೆ.

ಅಪಘಾತ ಸಂಭವಿಸಿದ ವೇಳೆ ಹಲವು ನಿಮಿಷಗಳ ಕಾಲ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದ್ದು, ಪ್ರಯಾಣಿಕರು ಪರದಾಡುವಂತೆ ಆತ್ತು. ಇದೇ ರಸ್ತೆಯಲ್ಲಿ ಕಳೆದ ಹದಿನೈದು ದಿನಗಳ ಕೆಳಗೆ ಬೈಕ್ ಮತ್ತು ಬಸ್‌ಗೆ ಡಿಕ್ಕಿ ಸಂಭವಿಸಿದ ಸಮಯದಲ್ಲಿ ಇದೇ ರೀತಿ ಪ್ರಯಾಣಿಕರು ಪರದಾಡಿದ್ದರು. ರಸ್ತೆಯಲ್ಲಿ ಅವೈಜ್ಞಾನಿಕವಾಗಿ ಹಂಪ್ಸ್ ಹಾಕಿರುವುದರಿಂದ ಸ್ಥಳದಲ್ಲಿ ಪದೇ ಪದೇ ಸಂಭವಿಸುವ ರಸ್ತೆ ಅಪಘಾತದಲ್ಲಿ ಸಾವು-ನೋವುಗಳು ಸಂಭವಿಸುತ್ತಿವೆ ಎಂದು ಸಾರ್ವಜನಿಕರು ಆಗ್ರಹಿಸಿದರು.

# ರೋಟರಿ, ಇನ್ನರ್‌ವ್ಹೀಲ್‌ನಿಂದ ನೇತ್ರ ದಿವಸ್




ದಾವಣಗೆರೆ, ಅ.15- ರೋಟರಿ ಹಾಗೂ ಇನ್ನರ್‌ವ್ಹೀಲ್ ಸಹಯೋಗದಲ್ಲಿ ನೇತ್ರ ದಿವಸ್ ನೇತ್ರದಾನ ಕಾರ್ಯಕ್ರಮವನ್ನು ನಡೆಸಲಾಯಿತು.

ವಿಶೇಷವಾಗಿ ನೇತ್ರ ದಿವಸ್ ಕಾರ್ಯಕ್ರಮವನ್ನು ಪ್ರಪಂಚದಾದ್ಯಂತ ಆಚರಿಸಲಾಯಿತು.

ಎಸ್.ಎನ್. ಮಳವಳ್ಳಿ ಹಾಗೂ ಶ್ರೀಮತಿ ಪ್ರೇಮ ಮಹೇಶ್ವರಪ್ಪ ಅವರು ಕ್ರಮವಾಗಿ ಸಮಾರಂಭದ ಅಧ್ಯಕ್ಷರಾಗಿದ್ದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನಿವೃತ್ತ ಜಿಲ್ಲಾಧಿಕಾರಿ ನೇತ್ರದಾನ ಹಾಗೂ ನೇತ್ರದಾನ ಅಭಿಯಾನದ ಕುರಿತು ವಿವರವಾಗಿ ಚರ್ಚಿಸಿ, ನೇತ್ರದಾನ ಮಹತ್ವದ ಬಗ್ಗೆ ಮಾಹಿತಿ ನೀಡಿದರು.

ಮನುಷ್ಯ ಮರಣ ಹೊಂದಿದ ನಂತರ ತನ್ನ ಕಣ್ಣುಗಳನ್ನು ದಾನ ಮಾಡಿ ಇನ್ನೊಬ್ಬರ ಜೀವಕ್ಕೆ ಬೆಳಕಾಗಬೇಕು. ಅದಕ್ಕೆ ಕೆಲವೊಂದು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಇದಕ್ಕೆ ಯಾವುದೇ ಜಾತಿ, ಲಿಂಗ, ಶ್ರೀಮಂತ, ಬಡವ ಎಂಬ ಭೇದವಿರುವುದಿಲ್ಲ ಎಂದು ಅವರು ಹೇಳಿದರು.

ಅಂಜಿನ ಮೂರ್ತಿ ವಂದಿಸಿದರು. ನಮ್ಮ ಸಂಸ್ಥೆಯಿಂದ ಪ್ರೇಮ, ನಾಗರತ್ನ, ಶಿಲ್ಪ, ಭಾಗ್ಯ, ಸೇರಿದಂತೆ ಇನ್ನು ಕೆಲವರು ಸ್ವಯಂ ಪ್ರೇರಿತರಾಗಿ ನೇತ್ರದಾನಕ್ಕೆ ಒಪ್ಪಿದರು.

## ಕೊಚಿನ್ ಶಿಪ್‌ಯಾರ್ಡ್ ಪಾಲುಗಾರಿಕೆ ಮಾರಾಟ

ನವದೆಹಲಿ, ಅ. 15 - ಕೊಚಿನ್ ಶಿಪ್‌ಯಾರ್ಡ್‌ನಲ್ಲಿನ ತನ್ನ ಶೇ.5ರಷ್ಟು ಪಾಲುಗಾರಿಕೆ ಮಾರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಅಕ್ಟೋಬರ್ 16ರಿಂದ ಪ್ರತಿ ಷೇರಿಗೆ 1,540 ರೂ. ಆರಂಭಿಕ ಬೆಲೆಯಲ್ಲಿ ಮಾರಲಾಗುವುದು. ಬಿ.ಎಸ್.ಇ.ನಲ್ಲಿ ಕೊಚಿನ್ ಶಿಪ್‌ಯಾರ್ಡ್ ಷೇರುಗಳ ಬೆಲೆ 1,672 ರೂ. ಆಗಿದೆ. ಶೇ.8ರ ವಿನಾಯಿತಿಯಲ್ಲಿ ಷೇರು ಮಾರಲಾಗುತ್ತಿದೆ.

# 21 ರಿಂದ ಕಾಲುಬಾಯಿ ರೋಗಕ್ಕೆ ಲಸಿಕೆ



ದಾವಣಗೆರೆ, ಅ.15- ಜಿಲ್ಲೆಯಲ್ಲಿನ ಜಾನುವಾರುಗಳಿಗೆ ಕಾಲುಬಾಯಿ ರೋಗ ತಡೆಗಾಗಿ 6ನೇ ಸುತ್ತಿನ ಲಸಿಕಾ ಕಾರ್ಯಕ್ರಮವನ್ನು ಅಕ್ಟೋಬರ್ 21 ರಿಂದ ನವೆಂಬರ್ 20 ರವರೆಗೆ ಸತತವಾಗಿ ಒಂದು ತಿಂಗಳ ಕಾಲ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ 20 ನೇ ಜಾನುವಾರು ಗಣತಿಯಂತೆ 329697 ದನ ಮತ್ತು ಎಮ್ಮೆಗಳಿದ್ದು ಇವುಗಳಿಗೆ ಶೇ 100 ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಕೇಂದ್ರ ಸರ್ಕಾರದಿಂದ 2,60,700 ಡೋಸ್ ಕಾಲು ಬಾಯಿ ರೋಗ ಲಸಿಕೆ ಸರಬರಾಜಾಗಿದ್ದು ಅಷ್ಟೇ ಪ್ರಮಾಣದ ಸಿರಿಂಜ್ ಸಹ ಸರಬರಾಜಾಗಿವೆ.

ಜಾನುವಾರುಗಳಿಗೆ ಲಸಿಕೆ ಹಾಕಲು ಒಂದು ಬ್ಲಾಕ್‌ಗೆ 100-120 ಜಾನುವಾರುಗಳಂತೆ 2800 ಬ್ಲಾಕ್ ಗಳನ್ನು ರಚಿಸಿದ್ದು 321 ಲಸಿಕಾದಾರರಿಗೆ ಬ್ಲಾಕ್‌ವಾರು ಲಸಿಕಾ ದಿನಾಂಕ ನಿಗದಿಪಡಿಸಲಾಗಿದೆ. ಹಾಗೂ ಲಸಿಕಾ ಸಂದರ್ಭದಲ್ಲಿ ಆಕಸ್ಮಿಕ ಪ್ರತಿಕೂಲ ಪರಿಣಾಮಗಳನ್ನು ಎದುರಿಸಲು ಅವಶ್ಯಕ ಔಷಧಿಗಳನ್ನು ಕೂಡಾ ಸಂಗ್ರಹಿಸಿಡಲಾಗಿದೆ. 4 ತಿಂಗಳ ಮೇಲಿನ ಎಲ್ಲಾ ಜಾನುವಾರುಗಳಿಗೆ ಮನೆ ಬಾಗಿಲಲ್ಲೇ ಲಸಿಕಾ ಹಾಕಲಾಗುತ್ತದೆ. ಕರುಗಳಿಗೆ 28 ದಿನಗಳ ನಂತರ ಬೂಸ್ಟರ್ ಲಸಿಕೆ ಹಾಕಲಾಗುತ್ತದೆ.

ಗರ್ಭ ಇರುವ, ರೋಗಗ್ರಸ್ತ ಮತ್ತು ಮಾಲೀಕರು ನಿರಾಕರಿಸಿದ ಜಾನುವಾರು ಗಳಿಗೆ ಕೂಂಬಿಂಗ್ ಕಾರ್ಯಕ್ರಮದಲ್ಲಿ ಲಸಿಕೆ ಹಾಕಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಪಾಲಿಕೆ ಆಯುಕ್ತರಾದ ರೇಣುಕಾ, ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆ ಉಪನಿರ್ದೇಶಕ ಡಾ.ಚಂದ್ರಶೇಖರ್ ಸುಂಕದ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

### ಜಿಲ್ಲೆಯಲ್ಲಿ ಜಾನುವಾರು:

**ದನಗಳು 237801, ಎಮ್ಮೆಗಳು 91896 ಸೇರಿ ಒಟ್ಟು 329697, ಕುರಿಗಳು 238367, ಮೇಕೆಗಳು 79429 ಸೇರಿ ಒಟ್ಟು 317796, ಮೊಲ 98, ಇತರೆ 45, ನಾಯಿಗಳು 12091, ಹಂದಿಗಳು 2117 ಸೇರಿ ಒಟ್ಟು ಜಾನುವಾರಗಳು 661844, ಕುಕ್ಕಟಗಳು 2505966 ಇವೆ.**

# ಮಾದಕ ನಿಯಂತ್ರಣಕ್ಕಾಗಿ ಕಾನೂನು ತಿದ್ದುಪಡಿ : ಸಿಎಂ ಮುಖ್ಯಮಂತ್ರಿ



ಬೆಂಗಳೂರು, ಅ. 15 - ಮಾದಕ ವಸ್ತುಗಳ ನಿಯಂತ್ರಣಕ್ಕೆ ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ತರಲು ಸರ್ಕಾರ ಯೋಚಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಅವರು ಇಂದು ರಾಜ್ಯ ಎನ್.ಎಸ್.ಎಸ್. ಕೋಶ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಹಭಾಗಿತ್ವದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ ತಂಬಾಕು ಮುಕ್ತ ಯುವ ಅಭಿಯಾನ 2.0 ಬೃಹತ್ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯುವಜನತೆ ಈ ದುಶ್ಚಟಕ್ಕೆ ಬಲಿಯಾಗದಂತೆ ಮಾದಕ ವಸ್ತುಗಳ ದಂಧೆಯನ್ನು ನಿಗ್ರಹಿಸುವುದೇ ಸರ್ಕಾರದ ಗುರಿ ಎಂದರು.

ವಿಶ್ವ ಆರೋಗ್ಯ ಸಂಘಟನೆ ವರದಿಯಂತೆ ಭಾರತದಲ್ಲಿ ಪ್ರತಿ ವರ್ಷ 13.5 ಲಕ್ಷ ಜನರು ತಂಬಾಕು ಸೇವನೆಯಿಂದ ಸಾವಿಗೀಡಾಗುತ್ತಿದ್ದಾರೆ ಎಂಬುದು ಆತಂಕ ಕಾರಿ ವಿಷಯ. ಯುವಜನತೆ ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಬದಲು ಈ ದುಶ್ಚಟಗಳಿಗೆ ಬಲಿಯಾಗುತ್ತಿರುವುದರಿಂದ ಈ ಪ್ರಮಾಣದ ಸಾವು ಸಂಭವಿಸುತ್ತಿದೆ. ತಂಬಾಕು ಸೇವಿಸುತ್ತಿರುವವರಲ್ಲಿ ಶೇ.50 ರಷ್ಟು ಜನ ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಯುವಜನತೆ ತಂಬಾಕು ಸೇವನೆ ಹಾಗೂ ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾಗಬಾರದು ಎಂದರು.

ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಧಾರವಾಡಗಳಲ್ಲಿ ಡ್ರಗ್ಸ್ ಹಾವಳಿ ಹೆಚ್ಚಿದ್ದು, ಇದನ್ನು ನಿಗ್ರಹಿಸಲು ಸರ್ಕಾರ ಅನೇಕ ಕಾನೂನುಗಳನ್ನು ರಚಿಸಿದೆ. ಯುವಕ, ಯುವತಿಯರು ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಿದ್ದಲ್ಲಿ, ಕೂಡಲೇ ದುಶ್ಚಟಗಳನ್ನು ನಿಲ್ಲಿಸಬೇಕೆಂದು ಕರೆ ನೀಡಿದರು.


# ನೆಲ-ಜಲ, ಕನ್ನಡ, ರೈತರ ವಿಷಯಗಳಿಗೆ ಹೋರಾಟ ನಡೆಸಿದವರ ಮೊಕದ್ದಮೆ ವಾಪಸ್ ಸಹಜ

ಬೆಂಗಳೂರು, ಅ. 15 - ಬಿಜೆಪಿ ಅಧಿಕಾರದ ಅವಧಿಯಲ್ಲಿ ಕೋಮುದ್ವೇಷಕ್ಕೆ ಸೇರಿದ 182 ಪ್ರಕರಣಗಳು ಸೇರಿದಂತೆ 385 ಮೊಕದ್ದಮೆಗಳನ್ನು ಹಿಂದಕ್ಕೆ ಪಡೆದಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನೆಲ-ಜಲ, ಕನ್ನಡ ಮತ್ತು ರೈತರ ವಿಷಯಗಳಿಗಾಗಿ ಹೋರಾಟ ನಡೆಸಿದವರ ವಿರುದ್ಧ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದು ಸಹಜ. ಅದೇ ರೀತಿ ನಮ್ಮ ಸರ್ಕಾರವು ಕಳೆದ ಸಂಪುಟ ಸಭೆಯಲ್ಲಿ ಕೆಲವು ಮೊಕದ್ದಮೆ ಹಿಂತೆಗೆದುಕೊಂಡಿದ್ದೇವೆ ಎಂದು ಸಮರ್ಥಿಸಿಕೊಂಡರು.

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ 43 ಕೇಸ್‌ಗಳನ್ನು ಹಿಂಪಡೆಯಲಾಗಿದೆ. ಶಾಶ್ವತ ನೀರಾವರಿಗಾಗಿ ಹೋರಾಟ ಮಾಡಿದವರ ಮೇಲಿನ ಪ್ರಕರಣಗಳನ್ನು ಡಾ.ಎಂ.ಸಿ.ಸುಧಾಕರ್ ಅವರ ಮನವಿ ಮೇರೆಗೆ ಹಿಂಪಡೆಯ ಲಾಗಿದೆ. ಸಂವಿಧಾನಕ್ಕೆ ಅಪಮಾನ ಮಾಡಿದವರ ವಿರುದ್ಧ ಹೋರಾಟ ಮಾಡಿದ ಎನ್.ಭಾಸ್ಕರ್, ಕರವೇಯ ನಾರಾಯಣ ಗೌಡ, ಗಣರಾಜ್ಯೋತ್ಸವ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ಇಡದೇ ಇರುವ ಕಾರಣಕ್ಕೆ ನಡೆದ ಪ್ರತಿಭಟನೆ, ಪೇಸಿಎಂ ಅಭಿಯಾನದಲ್ಲಿ ಪೋಸ್ಟರ್ ಅಂಟಿಸಿದವರ ವಿರುದ್ಧ ಹೀಗೆ ಒಂದಷ್ಟು ಜನಪರ ಹೋರಾಟಗಳನ್ನು ನಡೆಸುವಾಗ ದಾಖಲಾದ ಪ್ರಕರಣಗ ಳನ್ನು ಹಿಂದಕ್ಕೆ ಪಡೆಯಲಾಗಿದೆ ಎಂದವರು ಹೇಳಿದರು.

ಇದರಲ್ಲಿ ಹಳೇ ಹುಬ್ಬಳ್ಳಿ ಪ್ರಕರಣವೂ ಒಂದು ಇದನ್ನೂ ಸಹ ನಾವು ವಾಪಸ್ ಪಡೆದಿದ್ದೇವೆ. ಬಿಜೆಪಿಯವರು ಸತ್ಯ ಹರಿಶ್ಚಂದ್ರರಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಅವರ ಅಧಿಕಾರವಧಿಯಲ್ಲಿ ಯಾವ, ಯಾವ ಪ್ರಕರಣಗಳನ್ನು ಹಿಂಪಡೆದಿದ್ದರು ಎನ್ನುವ ದೊಡ್ಡ ಪಟ್ಟಿಯೇ ಇದೆ ಎಂದರು.



ಶ್ರೀರಾಮ ಸೇನೆ, ಭಜರಂಗ ದಳ, ಹಿಂದೂ ಜಾಗರಣ ವೇದಿಕೆ ಸದಸ್ಯರೇ ಇದರ ಲಾಭ ಪಡೆದಿದ್ದಾರೆ. 2018-20 ರ ಸಾಲಿನಲ್ಲಿ 127 ಕೇಸ್ ಗಳನ್ನು ಬಿಜೆಪಿ ಹಿಂದಕ್ಕೆ ಪಡೆದಿದೆ. ಇದರ ಫಲಾನುಭವಿಗಳು ಪಿಎಫ್ ಐ, ಎಸ್ ಡಿಪಿಐ ಅವರ ಮೇಲಿದ್ದ ಕೇಸ್ ಗಳನ್ನೂ ಹಿಂದಕ್ಕೆ ಪಡೆಯಲಾಗಿದೆ ಎಂದರು.

ನಾನು ಗೃಹ ಸಚಿವ ಆಗಿದ್ದಾಗ ನಡೆದ ಪರೇಸ್ ಮೇಸ್ತಾ ಸಾವಿನ ಪ್ರಕರಣದಲ್ಲಿ ಬಿಜೆಪಿಯವರು ರಾಜಕೀಯ ಲಾಭಕ್ಕಾಗಿ ಏನೇನೋ ಮಾಡಿದರು. ನಂತರ ಎನ್‌ಐಎ ತನಿಖಾ ತಂಡ ಆತನ ಸಾವನ್ನು ಆಕಸ್ಮಿಕ ಎಂದು ಹೇಳಿತು. ಬಿಜೆಪಿಯವರು ಹೆಣ ಬಿದ್ದರೆ ಸಾಕು ರಣಹದ್ದುಗಳಂತೆ ಕಾಯುತ್ತಿರುತ್ತಾರೆ. ಬಿಜೆಪಿಯವರ ಹೆಣದ ಮೇಲಿನ ರಾಜಕೀಯದ ಬಗ್ಗೆ ಪುಸ್ತಕವಿದ್ದು ಅದನ್ನು ಮತ್ತೊಮ್ಮೆ ಮುದ್ರಿಸಲಾಗುವುದು ಎಂದು ಹೇಳಿದರು.

## ಜಾತಿ ಪ್ರಮಾಣ ಪತ್ರ ಗೊಂದಲ

**(1ನೇ ಪುಟದಿಂದ)** ನಿಗಮದಲ್ಲಿ ಸುಮಾರು 89.63 ಕೋಟಿ ರೂ.ಗಳ ಮೊತ್ತದ ಅವ್ಯವಹಾರವಾಗಿದ್ದು, ಇದರಲ್ಲಿ 5 ಕೋಟಿ ರೂ.ಗಳನ್ನು ವಾಪಸ್ಸು ಪಡೆಯಲಾಗಿದೆ. ಉಳಿದ 84.63 ಕೋಟಿ ರೂ.ಗಳಲ್ಲಿ 71.54 ಕೋಟಿ ರೂ.ಗಳನ್ನು ವಸೂಲಿ ಮಾಡಲಾಗಿದೆ. ಇನ್ನುಳಿದ ಸುಮಾರು 13 ಕೋಟಿಗಳ ಮೊತ್ತವನ್ನು ವಸೂಲು ಮಾಡಿ ಕೊಡುವುದಾಗಿ ಎಸ್‌ಐಟಿ ತಿಳಿಸಿದೆ. ಈ ರೀತಿ ಒಟ್ಟು ಅವ್ಯವಹಾರವಾಗಿದ್ದ ಪೂರ್ಣ ಮೊತ್ತವನ್ನೂ ಸಹ ಮರುಪಡೆಯಲಾಗುತ್ತಿದೆ. ಈ ಮಧ್ಯೆ, ಪ್ರಕರಣ ನ್ಯಾಯಾಲಯದಲ್ಲಿ, ಮುಂಬರುವ ತೀರ್ಪಿನಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದರು. ರಾಜ್ಯದಲ್ಲಿ ನಡೆಯುವ ಉಪಚುನಾವಣೆಯನ್ನು ಎದುರಿಸಲು ಕಾಂಗ್ರೆಸ್ ಪಕ್ಷ ಸಿದ್ದವಾಗಿದೆ. ಈ ನಿಟ್ಟಿನಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಚುನಾವಣೆಯನ್ನು ಸಮರ್ಥವಾಗಿ ಎದುರಿಸಲಿದ್ದೇವೆ ಎಂದರು.

# ಎಐಡಿಎಸ್‌ಓ ಕಾರ್ಯಕರ್ತರು, ವಿದ್ಯಾರ್ಥಿಗಳಿಂದ ಬೃಹತ್ ಬೈಕ್ ರ‍್ಯಾಲಿ




### ಇಂದು ದಾವಣಗೆರೆ ಬಂದ್‌ಗೆ ಕರೆ

ದಾವಣಗೆರೆ, ಅ. 15- ಎಐಡಿಎಸ್‌ಓ ನೇತೃತ್ವದಲ್ಲಿ ನಾಳೆ ದಿನಾಂಕ 16 ರ ದಾವಣಗೆರೆ ಬಂದ್ ಗೆ ಬೆಂಬಲ ನೀಡಿರುವ ಹಲವು ಸಂಘಟನೆಗಳ ಮುಖಂಡರು – ಕಾರ್ಯಕರ್ತರು ಹಾಗೂ ಹಲವಾರು ಕಾಲೇಜುಗಳ ವಿದ್ಯಾರ್ಥಿಗಳು ಬೃಹತ್ ಬೈಕ್ ರ‍್ಯಾಲಿ ನಡೆಸಿದರು.

ಯುಬಿಡಿಟಿ ಕಾಲೇಜಿನ ಮುಂಭಾಗದಿಂದ ಪ್ರಾರಂಭವಾದ ಬೈಕ್ ರ‍್ಯಾಲಿ ಪುನಃ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಬೆಂಬಲ ವ್ಯಕ್ತಪಡಿಸಿ, ಮುಖ್ಯಮಂತ್ರಿಗಳಿಗೆ ನೀಡುವ ಮನವಿ ಪತ್ರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ನೀಡಿದರು.

ನಾಡಿನ ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿರುವ ಹೆಮ್ಮೆಯ ಯುಬಿಡಿಟಿ ಕಾಲೇಜನ್ನು ಉಳಿಸಲು, ಶೇ.50ರಷ್ಟು ಪೇಮೆಂಟ್ ಕೋಟಾ ರದ್ದು ಪಡಿಸಲು, ಅಮೃತ ಮಹೋತ್ಸವಕ್ಕೆ ಕಾಲಿಡುತ್ತಿರುವ ಯುಬಿಡಿಟಿಯ ಅಭಿವೃದ್ಧಿಗೆ ಅನುದಾನ ನೀಡಲು ಆಗ್ರಹಿಸಲಾಯಿತು.

ಬೈಕ್ ರ‍್ಯಾಲಿಯನ್ನು ಮಳೆಯ ನಡುವೆಯೂ ಅತ್ಯಂತ ಉತ್ಸಾಹದಿಂದ ನಗರದ ಎಲ್ಲಾ ಪ್ರಮುಖ ಬೀದಿಗಳಲ್ಲಿ ನಡೆಸಿ ಜಯದೇವ ವೃತ್ತದಲ್ಲಿ ಮುಕ್ತಾಯಗೊಳಿಸಲಾಯಿತು.

## ದಾವಣಗೆರೆ ಬಂದ್‌ಗೆ ಕರ್ನಾಟಕ ಏಕತಾ ವೇದಿಕೆ ಬೆಂಬಲ



ದಾವಣಗೆರೆ, ಅ.15- ಯುಬಿಡಿಟಿ ಕಾಲೇಜಿನ ಉಳಿವಿಗಾಗಿ ನಾಳೆ ದಿನಾಂಕ 16ರ ಬುಧವಾರ ದಾವಣಗೆರೆ ಬಂದ್‌ಗೆ ಕರ್ನಾಟಕ ಏಕತಾ ವೇದಿಕೆಯು ಸಂಪೂರ್ಣ ಬೆಂಬಲ ನೀಡಲಿದೆ ಎಂದು ವೇದಿಕೆಯ ಅಧ್ಯಕ್ಷ ಎನ್.ಹೆಚ್. ಹಾಲೇಶ್ ತಿಳಿಸಿದ್ದಾರೆ.

ರಾಜ್ಯದಲ್ಲಿರುವ 16 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪೈಕಿ ದಾವಣಗೆರೆಯ ಯುಬಿಡಿಟಿ ಕಾಲೇಜು ಒಂದಾಗಿದೆ. ಈ ಕಾಲೇಜಿನಲ್ಲಿ ಶೇ.50ರಷ್ಟು ಸೀಟುಗಳನ್ನು ಪೇಮೆಂಟಿಗೆ ಮಾರಾಟ ಮಾಡಿದರೆ ಬಡ ಹಾಗೂ ರೈತ ಮಕ್ಕಳ ಓದಿಗೆ ತೊಂದರೆಯಾಗಲಿದೆ ಎಂದು ದೂರಿದ್ದಾರೆ.

ಪ್ರತಿ ಬಡ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಮಾಡುವ ಕನಸನ್ನು ಸಾಕಾರ ಗೊಳಿಸುವ ಪ್ರಯತ್ನವಾಗಿ ಯುಬಿಡಿಟಿ ಕಾಲೇಜಿಗೆ ನೀಡುವ ಅನುದಾನವನ್ನು ಹೆಚ್ಚಿಸಿ, ಕೇವಲ ಸರ್ಕಾರಿ ಕೋಟವನ್ನು ಮಾತ್ರ ಅನ್ವಯಿಸಿ ಕಾಲೇಜು ನಡೆಸಬೇಕೆಂದು ಆಗ್ರಹಿಸಿದ್ದಾರೆ.

## ಜಗಳೂರು : ಇಂದು ವಿದ್ಯುತ್ ವ್ಯತ್ಯಯ

66/11 ಕೆವಿ ಬಿಳಿಚೋಡು ವಿ.ವಿ.ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳ ಎನ್.ಜೆ.ವೈ ಮಾರ್ಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಚಿಕ್ಕನಹಳ್ಳಿ ದೊಡ್ಡಪ್ಪ ಶಾಲಾ ಶಿಕ್ಷಕರಿಗೆ ಗುರುವಂದನೆ



ದಾವಣಗೆರೆ, ಅ.15- ಸ್ವಾಮಿ ವಿವೇಕಾನಂದ ಬಡಾವಣೆಯ ಶ್ರೀ ರಾಮಾಂಜನೇಯ ವಿದ್ಯಾಸಂಸ್ಥೆಯ ಶ್ರೀ ಚಿಕ್ಕನಹಳ್ಳಿ ದೊಡ್ಡಪ್ಪ ಪ್ರೌಢಶಾಲೆಯ 1997-98 ಸಾಲಿನ 10ನೇ ತರಗತಿಯ ಹಳೇ ವಿದ್ಯಾರ್ಥಿಗಳಿಂದ ಅರ್ಥಪೂರ್ಣ ಗುರುವಂದಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ನಗರದ ರಾಸ್ತಾ ಹೋಟೆಲ್‌ನಲ್ಲಿ ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನಿವೃತ್ತ ಮುಖ್ಯೋಪಾಧ್ಯಾಯರಾದ ಡಿ. ರುದ್ರಮುನಿ ಅವರು, 26 ವರ್ಷಗಳ ನಂತರ ಈ ಕಾರ್ಯಕ್ರಮ ಸಾರ್ಥಕತೆ ಎನಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಿಕ್ಷಕರನ್ನು ಸನ್ಮಾನಿಸಿ, ಗೌರವಿಸಲಾಯಿತು. ಮುಖ್ಯೋಪಾಧ್ಯಾಯರಾದ ಹೆಚ್. ಶಿವಮೂರ್ತಿ, ಶಿಕ್ಷಕರುಗಳಾದ ಆರ್.ಆರ್. ಬೋಳಕಟ್ಟೆ, ಮಹೇಶ್ವರಪ್ಪ, ಮಂಜಪ್ಪ, ಜಗದೀಶ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಶಾಲೆಯ ಸಿಬ್ಬಂದಿಗಳಾದ ನಾಗರಾಜಪ್ಪ, ರಾಮಣ್ಣ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಚುನಾವಣೋತ್ತರ ಸಮೀಕ್ಷೆಗೆ ಚುನಾವಣಾ ಆಯೋಗದ ಆಕ್ಷೇಪ

ನವದೆಹಲಿ, ಅ. 15 - ಮತ ಎಣಿಕೆ ದಿನದಂದು ಮಾಧ್ಯಮಗಳಲ್ಲಿ ಆರಂಭಿಕ ಹಂತದಲ್ಲೇ ಫಲಿತಾಂಶದ ಸ್ವರೂಪ ಬಿಂಬಿಸುವುದಕ್ಕೆ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಟೀಕಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೋತ್ತರ ಸಮೀಕ್ಷೆಗಳ ಬಗ್ಗೆಯೂ ಆಕ್ಷೇಪಿಸಿದ್ದಾರೆ. ಚುನಾವಣೋತ್ತರ ಸಮೀಕ್ಷೆಗಳ ಕಾರಣದಿಂದ ಜನರ ನಿರೀಕ್ಷೆಗಳು ಹೆಚ್ಚಾಗುತ್ತವೆ. ಈ ಬಗ್ಗೆ ಮಾಧ್ಯಮಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದಿದ್ದಾರೆ.

ಚುನಾವಣೋತ್ತರ ಸಮೀಕ್ಷೆಗಳ ಸ್ವರೂಪ, ಎಲ್ಲಿ ಸಮೀಕ್ಷೆ ನಡೆಸಲಾಗಿದೆ, ಯಾವ ರೀತಿ ಫಲಿತಾಂಶ ಬಂದಿದೆ ಹಾಗೂ ಸಮೀಕ್ಷೆಗೂ - ಫಲಿತಾಂಶಕ್ಕೂ ತಾಳೆ ಆಗದಿದ್ದರೆ ನಮ್ಮ ಹೊಣೆಗಾರಿಕೆ ಏನು ಎಂಬುದರ ಬಗ್ಗೆ ಮಾಧ್ಯಮಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದಿದ್ದಾರೆ. ಸಾಮಾನ್ಯವಾಗಿ ಮತದಾನ ಪೂರ್ಣಗೊಂಡ ಮೂರು ದಿನಗಳ ನಂತರ ಮತಗಳ ಎಣಿಕೆ ಆರಂಭ ವಾಗುತ್ತದೆ. ಆದರೆ ಚುನಾವಣೆ ಪೂರ್ಣಗೊಂಡ ನಂತರ ಸಂಜೆ 6 ಗಂಟೆಗೆ ಪ್ರಕಟವಾಗುವ ಸಮೀಕ್ಷೆ ಗಳ ಕಾರಣದಿಂದ ಜನರ ನಿರೀಕ್ಷೆಗಳು



ಹೆಚ್ಚಾಗುತ್ತವೆ. ಈ ಸಮೀಕ್ಷೆಗಳಿಗೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ ಎಂದು ಕುಮಾರ್ ಹೇಳಿದರು. ಮತ ಎಣಿಕೆ ದಿನದಂದು ಬೆಳಗ್ಗೆ 8.05 ಇಲ್ಲವೇ 8.10ರ ಸಮಯದಲ್ಲೇ ಫಲಿತಾಂಶದ ಸ್ವರೂಪ ತಿಳಿಸಲಾಗುತ್ತದೆ. ಇದರಲ್ಲಿ ಯಾವುದೇ ಅರ್ಥವಿಲ್ಲ. ನಮ್ಮ ಎಣಿಕೆ ಆರಂಭವಾಗುವುದೇ ಬೆಳಿಗ್ಗೆ 8.30ರಿಂದ ಎಂದವರು ಹೇಳಿದರು.

ಚುನಾವಣೋತ್ತರ ಸಮೀಕ್ಷೆಗಳನ್ನು ಸಮರ್ಥಿ ಸುವ ಸಲುವಾಗಿಯೇ ಆರಂಭಿಕ ಮತ ಎಣಿಕೆಯ ವಿವರಗಳನ್ನು ಮಾಧ್ಯಮಗಳು ಪ್ರಕಟಿಸುತ್ತವೆಯೇ ಎಂದೂ ಅವರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಚುನಾವಣಾ ಆಯೋಗ ಮತಗಳ ಎಣಿಕೆ ವಿವರ ಇಲ್ಲವೇ ಫಲಿತಾಂಶಗಳನ್ನು ಬೆಳಿಗ್ಗೆ 9.30ರ ನಂತರದಿಂದ ತನ್ನ ವೆಬ್ ತಾಣದಲ್ಲಿ ಪ್ರಕಟಿಸುತ್ತದೆ. ಪ್ರತಿ ಎರಡು ಗಂಟೆಗೊಮ್ಮೆ ವಿವರಗಳನ್ನು ತಿಳಿಸಲಾಗುತ್ತದೆ ಎಂದವರು ಹೇಳಿದರು.

## ಜನ ಏನಾದರೂ ಹೇಳುತ್ತಿರುತ್ತಾರೆ

### ಚುನಾವಣಾ ಅಕ್ರಮಗಳ ಆರೋಪಕ್ಕೆ ಆಯೋಗದ ಪ್ರತಿಕ್ರಿಯೆ

ನವದೆಹಲಿ, ಅ. 15 - ಇತ್ತೀಚೆಗೆ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳಿಗೆ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಹಿಂದಿ ಹಾಡೊಂದರ ಸಾಲಿನ ಮೂಲಕ ಉತ್ತರ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕುಚ್ ತೋ ಲೋಗ್ ಕಹೇಂಗೆ, ಲೋಗೋನ್ ಕಾ ಕಾಮ್ ಹೇ ಕೆಹನ' (ಜನ ಏನಾದರೂ ಹೇಳುತ್ತಿರುತ್ತಾರೆ, ಏನಾದರೂ ಹೇಳುವುದೇ ಅವರ ಕೆಲಸ) ಎಂದಿದ್ದಾರೆ. ಒಂದು ಚುನಾ ವಣೆಯ ನಂತರ ಮತ್ತೊಂದು ಚುನಾವಣೆಯಲ್ಲಿ ಜನರು ಪಾಲ್ಗೊಳ್ಳುವುದು ಹೆಚ್ಚಾಗುತ್ತಿದೆ, ಹಿಂಸಾಚಾರ ಕಡಿಮೆಯಾಗುತ್ತಿದೆ ಹಾಗೂ ಚುನಾವಣಾ ಅಕ್ರಮಕ್ಕೆ ಬಳಸುತ್ತಿದ್ದ ಸರಕುಗಳ ವಶ ಹೆಚ್ಚಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಜನರಿಗೆ ನಂಬಿಕೆ ಇದೆ ಎಂಬುದನ್ನು, ಹೆಚ್ಚು ಜನರು ಮತದಾನದಲ್ಲಿ ಪಾಲ್ಗೊಳ್ಳುತ್ತಿರುವುದು ತೋರಿಸುತ್ತಿದೆ ಎಂದು ಕುಮಾರ್ ಹೇಳಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಣೆ ಸಂದರ್ಭದಲ್ಲೂ ಕುಮಾರ್ ಅವರು ಚುಟುಕು ಕವಿತೆಯೊಂದನ್ನು ಹೇಳಿದ್ದರು.

'ಅಧೂರಿ ಹಸ್ರತೋಂ ಕಾ ಇಲ್ಜಾಂ ಹರ್ ಬಾರ್ ಹಮ್ ಪರ್ ಲಗಾನಾ ಠೀಕ್ ನಹಿ, ವಫಾ ಖುದ್ ಸೆ ನಹಿ ಹೋತಿ, ಖತಾ ಇವಿಎಂ ಕಿ ಕೆಹ್ತೆ ಹೊ, ಔರ್ ಬಾದ್ ಮೇ ಜಬ್ ಪರಿಣಾಮ ಆತಾ ಹೈ ತೋ ಉಸ್ಮೆ ಕಾಯಮ್ ಭಿ ನಹಿ ರೆಹತೆ' ಎಂದು ಆ ಸಂದರ್ಭದಲ್ಲಿ ಕುಮಾರ್ ಹೇಳಿದ್ದರು.

ಯಾರಾದರೂ ತಮ್ಮ ಕೆಲಸ ಸರಿಯಾಗಿ ಮಾಡದೇ, ನಂತರ ಚುನಾವಣಾ ಆಯೋಗದ ಮೇಲೆ ಆರೋಪ ಮಾಡುವುದು ಸರಿಯಲ್ಲ ಎಂಬುದು ಈ ಸಾಲುಗಳ ಅರ್ಥವಾಗಿತ್ತು.

## ಮತಯಂತ್ರ ಬ್ಯಾಟರಿ ಆರೋಪ, ಮುಂದೇ ಯಾವ ಆರೋಪವೋ ಗೊತ್ತಿಲ್ಲ : ರಾಜೀವ್

ನವದೆಹಲಿ, ಅ. 15 - ಹರಿಯಾಣ ವಿಧಾನಸಭಾ ಚುನಾವಣೆ ವೇಳೆ ಮತಯಂತ್ರಗಳನ್ನು ತಿರುಚಲಾಗಿತ್ತು ಎಂಬ ಕಾಂಗ್ರೆಸ್ ನಾಯಕರ ಆರೋಪಗಳನ್ನು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಳ್ಳಿ ಹಾಕಿದ್ದಾರೆ. ಯಂತ್ರಗಳಲ್ಲಿನ ಬ್ಯಾಟರಿ ಪ್ರಮಾಣ ಉಲ್ಲೇಖಿಸಿ ಕಾಂಗ್ರೆಸ್ ಆರೋಪ ಮಾಡಿತ್ತು.

ಮೊದಲ ಬಾರಿ ಈ ರೀತಿಯ ಆರೋಪಗಳು ಕೇಳಿ ಬಂದಿವೆ. ಮುಂದೆ ಯಾವ ಆರೋಪ ಕೇಳಿ ಬರುತ್ತದೋ ಗೊತ್ತಿಲ್ಲ. ಆದರೆ ಏನಾದರೂ ಹೊಸದು ಬರುವುದು ನಿಶ್ಚಿತ ಎಂದು ಕುಮಾರ್ ಹೇಳಿದ್ದಾರೆ.

ಮತದಾನ ನಡೆಯುವ ಆರು ದಿನ ಮುಂಚೆ ಮತಯಂತ್ರಗಳನ್ನು ಸಜ್ಜುಗೊಳಿಸಲಾಗುತ್ತದೆ. ಅಭ್ಯರ್ಥಿಗಳ ಸಂಕೇತಗಳನ್ನು ಅಳವಡಿಸಲಾಗುತ್ತದೆ ಹಾಗೂ ಹೊಸ ಬ್ಯಾಟರಿ ಅಳವಡಿಸಲಾಗುತ್ತದೆ. ಈ ಬ್ಯಾಟರಿಗಳ ಮೇಲೆ ಅಭ್ಯರ್ಥಿಗಳ ಇಲ್ಲವೇ ಅವರ ಏಜೆಂಟರ ಸಹಿ ಇರುತ್ತದೆ ಎಂದು ಕುಮಾರ್ ಹೇಳಿದರು.

ಮತಯಂತ್ರಗಳಷ್ಟೇ ಅಲ್ಲದೆ ಬ್ಯಾಟರಿಗಳ ಮೇಲೂ ಸಹಿ ಪಡೆಯಲಾಗುತ್ತದೆ. ಈ ನಿಯಮ ಸಾಕಷ್ಟು ಮೊದಲಿನಿಂದಲೂ ಜಾರಿಯಲ್ಲಿದೆ. ಈ ನಿಯಮ ನಮಗೆ ನೆರವಾಗುತ್ತಿದೆ ಎಂದು ಮುಖ್ಯ ಚುನಾವಣಾ ಆಯುಕ್ತರು ಹೇಳಿದರು.

## ಜಿಗಳಿಯಲ್ಲಿ ಇಂದು ರಕ್ತದಾನ ಶಿಬಿರ

ಜಿಗಳಿ ಗ್ರಾ.ಪಂ. ಕಛೇರಿಯಲ್ಲಿ ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ರವರೆಗೆ ಜಿಗಳಿ ಗ್ರಾ.ಪಂ. ಮತ್ತು ಹೊಳೆಸಿರಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಿಡಿಓ ಉಮೇಶ್, ವೈದ್ಯಾಧಿಕಾರಿ ಡಾ. ಚೇತನ್ ತಿಳಿಸಿದ್ದಾರೆ.

**ಗೌರವಾನ್ವಿತ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದಾವಣಗೆರೆ.**

**ಅಸಲು ದಾವಾ ಸಂಖ್ಯೆ : 233 / 2023**

ವಾದಿ : **ಶಿವಶಂಕರ್ ಟಿ.ಎಂ.** - ವಿರುದ್ಧ - ಪ್ರತಿವಾದಿಯರು : **ಟಿ.ಎಂ. ಉದಯರವಿ ಮತ್ತು ಇನ್ನೊಬ್ಬರು**

2ನೇ ಪ್ರತಿವಾದಿ : **ಶ್ರೀಮತಿ ಗೌರಮ್ಮ** ತಂದೆ ಟಿ.ಎಂ. ಮರಿವೀರಯ್ಯ, ಮೃತ ಕಾನೂನುಬದ್ಧ ವಾರಸುದಾರರು

2 (ಎ) **ಶ್ರೀಮತಿ ಡಿ.ಎಂ.ಸುಧಾ** ತಾಯಿ ಲೇಟ್ ಗೌರಮ್ಮ, 50 ವರ್ಷ, ಗೃಹಿಣಿ, ವಾಸ : ಕೇರ್‌ಆಫ್ ಶ್ರೀ ಟಿ.ಎಂ. ಉದಯ ರವಿ, ಡೋರ್ ನಂ.313, ಆಕಾಂಕ್ಷ, ಆಲ್ ಅರೀಮ್ ಲೇಔಟ್ ಗೋಪಾಲ ಬಡಾವಣೆ, ಶಿವಮೊಗ್ಗ - 577205 (ಉದ್ದೇಶಿತ 3ನೇ ಪ್ರತಿವಾದಿ)

2 (ಬಿ) **ಶ್ರೀಮತಿ ಡಿ.ಎಂ.ರೇಖಾ** ತಾಯಿ ಲೇಟ್ ಗೌರಮ್ಮ, 48 ವರ್ಷ, ಗೃಹಿಣಿ, ವಾಸ : ಕೇರ್‌ಆಫ್ ಶ್ರೀ ಟಿ.ಎಂ.ಉದಯ ರವಿ, ಡೋರ್ ನಂ.313, ಆಕಾಂಕ್ಷ, ಆಲ್ ಅರೀಮ್ ಲೇಔಟ್ ಗೋಪಾಲ ಬಡಾವಣೆ, ಶಿವಮೊಗ್ಗ - 577 205 (ಉದ್ದೇಶಿತ 4ನೇ ಪ್ರತಿವಾದಿ).

2 (ಸಿ) **ಶ್ರೀಮತಿ ಡಿ.ಎಂ.ರೂಪಾ** ತಾಯಿ ಲೇಟ್ ಗೌರಮ್ಮ, 40 ವರ್ಷ, ಗೃಹಿಣಿ, ವಾಸ : ಕೇರ್‌ಆಫ್ ಶ್ರೀ ಟಿ.ಎಂ.ಉದಯ ರವಿ ಡೋರ್ ನಂ. 313, ಆಕಾಂಕ್ಷ, ಆಲ್ ಅರೀಮ್ ಲೇಔಟ್ ಗೋಪಾಲ ಬಡಾವಣೆ, ಶಿವಮೊಗ್ಗ - 577 205 (ಉದ್ದೇಶಿತ 4ನೇ ಪ್ರತಿವಾದಿ).

2 (ಡಿ) **ಕುಮಾರಿ ಡಿ.ಎಂ.ಲೀಲಾ** ತಾಯಿ ಲೇಟ್ ಗೌರಮ್ಮ, 40 ವರ್ಷ, ಮನೆಗೆಲಸ, ವಾಸ : ಕೇರ್‌ಆಫ್ ಶ್ರೀ ಟಿ.ಎಂ.ಉದಯ ರವಿ, ನಂ. 313, ಆಕಾಂಕ್ಷ, ಆಲ್ ಅರೀಮ್ ಲೇಔಟ್ ಗೋಪಾಲ ಬಡಾವಣೆ, ಶಿವಮೊಗ್ಗ - 577 205 (ಉದ್ದೇಶಿತ 5ನೇ ಪ್ರತಿವಾದಿ).

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರ ಅಡಿ 2ನೇ ಪ್ರತಿವಾದಿಯ ಕಾನೂನುಬದ್ಧ ವಾರಸುದಾರರಿಗೆ ನೀಡಲಾದ ಮಧ್ಯಂತರ ಅರ್ಜಿ ನೋಟೀಸ್**

ಈ ದಾವೆಯ ಮೇಲ್ಕಂಡ ವಾದಿ ದಾವಣಗೆರೆ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಂ.ಎಫ್. ನ್ಯಾಯಾಲಯದಲ್ಲಿ ಮೇಲ್ಕಂಡ 1ನೇ ಪ್ರತಿವಾದಿ ಮತ್ತು 2ನೇ ಪ್ರತಿವಾದಿ ಗೌರಮ್ಮನ ವಿರುದ್ಧ ಕರಾರು ಪತ್ರ ಷರತ್ತುಗಳ ನೆರವೇರಿಕೆಗಾಗಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯ ಕಾನೂನುಬದ್ದ ವಾರಸುದಾರರಾದ ಉದ್ದೇಶಿತ ಪ್ರತಿವಾದಿ ಸಂಖ್ಯೆ 2 (ಎ) ರಿಂದ 2 (ಡಿ) ಆದ ನೀವು ನ್ಯಾಯಾಲಯದಿಂದ ಇದೂವರೆಗೂ ನೋಟೀಸನ್ನು ಮತ್ತು ಮಧ್ಯಂತರ ಅರ್ಜಿ ನೋಟಿಸ್ ಅನ್ನು ನ್ಯಾಯಾಲಯದ ಪ್ರಕ್ರಿಯೆ ಹಾಗೂ ಅಂಚೆ ಪತ್ರ ಮುಖೇನ ನೀಡಿದರೂ ಉದ್ದೇಶಪೂರ್ವಕವಾಗಿ ತೆಗೆದುಕೊಳ್ಳದೇ ಮತ್ತು ನ್ಯಾಯಾಲಯದ ಪ್ರಕ್ರಿಯೆಯಲ್ಲಿ ಹಾಜರಾಗದೇ ತಪ್ಪಿಸಿಕೊಳ್ಳುತ್ತಿರುವ ಪ್ರಯುಕ್ತ ಈ ಬಗ್ಗೆ ದಾವಾ ಮುಂದಿನ ನಡವಳಿಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಲು ಮತ್ತು ಈ ಬಗ್ಗೆ ತಮ್ಮ ತಕರಾರು ಏನಾದರೂ ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕವಾಗಲೀ ತಾ: 8.11.2024ರಂದು ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ನಿಮ್ಮ ವಿರುದ್ಧ ನಿರ್ಣಯಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ನನ್ನ ದಸ್ಕತ್ತಿನೊಂದಿಗೆ ತಾ: 14.10.2024 ರಂದು ಆದೇಶ ನೀಡಲಾಗಿದೆ.

**ಸಹಿ/- ಅರ್ಜಿದಾರರ ಪರ ವಕೀಲರು**
**(ಯೋಗೇಶ್ವರಪ್ಪ ಆರ್.)** ಬಿಎ, ಎಲ್‌ಎಲ್‌ಬಿ
**ಸ್ಥಳ : ದಾವಣಗೆರೆ. ದಿನಾಂಕ : 30.09.2024**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು, 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಹಾಗೂಜೆ.ಎಂ.ಎಫ್.(ಸಿ.ಜೆ.ಎಂ.) ನ್ಯಾಯಾಲಯ, ದಾವಣಗೆರೆ.**



## ಪದ್ದು ಕಾಫಿ ಬಾರ್ ಕಟ್ಟೆ ಗೆಳೆಯರ ಬಳಗದಿಂದ ರತನ್ ಟಾಟಾಗೆ ಶ್ರದ್ಧಾಂಜಲಿ

ದಾವಣಗೆರೆ, ಅ. 15- ಭಾರತದ ಉದ್ಯಮ ವಲಯದ ಬೆಳವಣಿಗೆಗಾಗಿ ದೊಡ್ಡ ಕೊಡುಗೆ ನೀಡುತ್ತಾ, ಶತಕೋಟಿ ಸಮಾಜಮುಖಿ ಕೆಲಸಗಳಿಂದ ಹೆಸರುವಾಸಿಯಾಗಿದ್ದ ಉದ್ಯಮಿ ರತನ್ ಟಾಟಾ ಅವರ ನಿಧನಕ್ಕೆ ಪದ್ದು ಕಾಫಿ ಬಾರ್ ಕಟ್ಟೆ ಗೆಳೆಯರ ಬಳಗದಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು.

ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮಾತನಾಡಿ, ರತನ್ ಟಾಟಾ ಭಾರತದಲ್ಲಿ ಕೇವಲ ಉದ್ಯಮ ಮಾತ್ರ ಕಟ್ಟಲಿಲ್ಲ. ಲಕ್ಷಾಂತರ ಬಡವರ ಮನೆಗಳ ನಂದಾದೀಪವಾಗಿದ್ದಾರೆ. ಕೇವಲ ಲಾಭಕ್ಕಾಗಿ ಎಂದಿಗೂ ಉದ್ಯಮ ಮಾಡದೇ, ಶ್ರೀಮಂತರ ಪಟ್ಟಿಯಲ್ಲಿ ಹೆಸರನ್ನೂ ಬಯಸದೇ ಕೊಡಗೈ ದಾನಿಯಾಗಿದ್ದರು ಎಂದು ಸ್ಮರಿಸಿದರು. ಭಾರತದಲ್ಲಿ ಉಪ್ಪು ಮಾರಾಟದಿಂದ ಹಿಡಿದು ಕೋಟಿ ಕೋಟಿ ರೂಪಾಯಿ ಬೆಲೆ ಬಾಳುವ ಕಾರ್‌ಗಳ ತನಕ ವ್ಯಾಪಾರ ಮಾಡಿ ಸೈ ಎನಿಸಿಕೊಂಡವರು. ಟಾಟಾ ಸಂಸ್ಥೆಯನ್ನು ಕಟ್ಟಿ ಬೆಳೆಸಿ ದೊಡ್ಡ ಮಟ್ಟದ ಸಾಲಿನಲ್ಲಿ ತಂದು ನಿಲ್ಲಿಸಿದವರು ರತನ್ ಟಾಟಾ ಎಂದರು.

ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್, ಕೆ.ಜಿ. ಶಿವಕುಮಾರ್, ಕೇರಂ ಗಣೇಶ್, ಡಿ.ಎನ್. ಜಗದೀಶ್, ವಿಜಯಕುಮಾರ್, ಗೋಪಾಲ್ ಜಿ., ಯುವರಾಜ್, ವೆಂಕಟೇಶ್‌ಮೂರ್ತಿ, ಸತೀಶ್ ಶೆಟ್ಟಿ, ವಿಜಯ್, ಕರಿಬಸಪ್ಪ, ಬುನಿಯನ್ ಭಾಸ್ಕರ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕ್ರೀಡಾಕೂಟದಲ್ಲಿ ಜಿಲ್ಲಾ, ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ



ಮಲೇಬೆನ್ನೂರು, ಅ.15- ಕುಂಬಳೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜರುಗಿದ ಗಾಂಧೀಜಿ ಮತ್ತು ಶಾಸ್ತ್ರೀಜಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಕ್ರೀಡಾಕೂಟದಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಾದ ಲೋಹಿತ್, ಭಾಗ್ಯ ಮತ್ತು ಮೆಹಬೂಬಿ ಅವರನ್ನು ಕಾಲೇಜು ಮತ್ತು ಪ್ರೌಢಶಾಲೆ ಎಸ್.ಡಿ.ಎಂ.ಸಿ. ಮತ್ತು ಉಪನ್ಯಾಸಕರು ಹಾಗೂ ಶಿಕ್ಷಕರ ವತಿಯಿಂದ ಸನ್ಮಾನಿಸಲಾಯಿತು.

## ದಸರಾ ಕ್ರೀಡಾಕೂಟ : ವರ್ಷಿಣಿ ತೃತೀಯ



ಮಲೇಬೆನ್ನೂರು, ಅ.15- ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಬಿ.ಎಂ. ವರ್ಷಿಣಿ ಅವರು ಆರ್ಚರಿ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿ ತೃತೀಯ ಸ್ಥಾನ ಪಡೆದಿದ್ದಾರೆ.

## ಕ್ರೀಡಾ ವಸತಿ ನಿಲಯದ ಖೋ-ಖೋ ತಂಡಕ್ಕೆ ಬೆಳ್ಳಿ ಪದಕ



ದಾವಣಗೆರೆ, ಅ. 15 - ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಕಳೆದ ವಾರ ನಡೆದ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಖೋ-ಖೋ ಪಂದ್ಯಾವಳಿಯಲ್ಲಿ ನಗರದ ಕ್ರೀಡಾ ವಸತಿ ನಿಲಯದ ಪುರುಷರ ಖೋ-ಖೋ ತಂಡವು ಬೆಳ್ಳಿ ಪದಕ ಪಡೆದಿದೆ.

ಗಗನ್, ಸಿದ್ಧರೂಢ, ಶರತ್, ಅರ್ಜುನ, ಮಹಮ್ಮದ್ ತಾಸೀನ್, ನಾಗರಾಜ, ರಾಜು, ಧನರಾಜ್, ಆಸೀಫ್, ಷರೀಫ್, ಲಕ್ಷ್ಮಣ ಹಾಗೂ ಲಂಕೇಶ ಇವರುಗಳು ಉತ್ತಮ ಪ್ರದರ್ಶನ ನೀಡಿರುತ್ತಾರೆ. ತಂಡದ ತರಬೇತುದಾರರಾಗಿ ಜೆ. ರಾಮಲಿಂಗಪ್ಪ, ತಂಡದ ವ್ಯವಸ್ಥಾಪಕರಾಗಿ ರವಿಕೆ ಅವರು ಭಾಗವಹಿಸಿದ್ದರು.

# ಪ್ರಸಕ್ತ ಹಿಂಗಾರು ಮಳೆಯ ಅನುಕೂಲ/ಅನಾನುಕೂಲ ನಿರ್ವಹಣೆ

**ಆರ್.ಜಿ. ಗೊಲ್ಲರ್**

ಮುಖ್ಯವಾಗಿ ಹೆಚ್ಚಾದ ಮಳೆಯಿಂದ ಬೆಳೆಗಳನ್ನು ರಕ್ಷಿಸಲು ಹೊಲದಿಂದ ಮಳೆ ನೀರು ಹರಿದು ಹೋಗಲು ವ್ಯವಸ್ಥೆ ಮಾಡಬೇಕು.





* ಹತ್ತಿ, ಮೆಣಸಿನಗಿಡ, ಕಡಲೆಗಳಲ್ಲಿ ಬುಡ ಕೊಳೆ ಬಾಧೆ ತಡೆಯಲು 3 ಗ್ರಾಂ/ ಲೀ ಕಾರ್ಬೆಂಡೈಜಿಂ ಬೆರೆಸಿದ ದ್ರಾವಣವನ್ನು ಬಾಧಿತ ಮತ್ತು ಸುತ್ತಲಿನ ಬೆಳೆಯ ಬುಡಕ್ಕೆ ಸುರಿಯಬೇಕು.

* ಹತ್ತಿ ಬೆಳೆಯಲ್ಲಿ ಪೋಷಕಾಂಶ (ಪ್ರತಿ ಲೀ. ನೀರಿನಲ್ಲಿ 6 ಗ್ರಾಂ 0:52:34 ಮತ್ತು 4 ಗ್ರಾಂ 19 ಆಲ್) ಮತ್ತು ಶಿಲೀಂಧ್ರನಾಶಕ (ಟಿಲ್ಟ್ @ 1 ಮಿಲೀ/ ಲೀ) ಸಿಂಪಡಣೆ ಅತ್ಯಗತ್ಯ. ಗುಲಾಬಿ ಕಾಯಿಕೊರಕ ಬಾಧೆ ತಡೆಯಲು ಕೊರಾಜೆನ್ (0.4 ಮಿಲೀ/ಲೀ) ಅಥವಾ ಡೆಲಿಗೇಟ್ (0.8 - 0.9 ಮಿಲಿ ಲೀಟರ್) ಬಳಸಬಹುದು.

* ಮಸಾರಿಗಳಲ್ಲಿ ಬೆಳೆದ ಹತ್ತಿ ಬೆಳೆಯಲ್ಲಿ ಹುರುಳಿಯನ್ನು ಸರಪಳಿ ಬೆಳೆಯಾಗಿ ಊರುವ ಮೂಲಕ ಗುಣಮಟ್ಟದ ಮೇವು ಪಡೆಯಬಹುದು.

* ಹಿಂಗಾರಿ ಜೋಳದಲ್ಲಿ ಹೆಚ್ಚಿದ ತೇವಾಂಶ ಮತ್ತು ಸುಳಿ ತಿಗಣೆ ಬಾಧೆ ನಿವಾರಣೆಗೆ 19 ಆಲ್ @ 5 ಗ್ರಾಂ, ಲಘು ಪೋಷಕಾಂಶ ಮತ್ತು ಇಮಾಮೆಕ್ಟಿನ್ ಬೆಂಜೋಯೇಟ್ @ 0.5 ಗ್ರಾಂ ಸುಳಿಯೊಳಗೆ ಮತ್ತು ಸಮಗ್ರವಾಗಿ ಸಿಂಪಡಿಸಿ. ಇದೇ ಸಿಂಪಡಣೆಯನ್ನು ಕಡಲೆಯಲ್ಲೂ ಸಹ ಮಾಡಬಹುದು.

* ಮಳೆಯಾಶ್ರಯದ ತಗ್ಗು ಪ್ರದೇಶದಲ್ಲಿ ನೀರು ನಿಂತು ಹಾಳಾದ ಬೆಳೆಯನ್ನು ಹರಗಿ ಕಡಲೆ ಅಥವಾ ಮಳೆಯಾಶ್ರಿತ ಗೋಧಿ ಬಿತ್ತಬಹುದು.

ಈ ಸಮಯದಲ್ಲಿ ನೀರಾವರಿ ಗೋಧಿ ಬಿತ್ತನೆ ಮಾಡಬಾರದು.

* ಬಿತ್ತುವ ಎಲ್ಲಾ ಬೀಜಗಳನ್ನು ಕ್ಲೋರ್ ಪೈರಿಫಾಸ್ ಮತ್ತು ಕಾರ್ಬೆಂಡೈಜಿಂಗಳಿಂದ ಉಪಚರಿಸಿಯೇ ಬಿತ್ತಬೇಕು.

* ಸೈನಿಕ ಹುಳು ಬಾಧೆ ಮರುಕಳಿಸುವುದು, ಜೋಳದಲ್ಲಿ ಸುಳಿ ನೊಣ ಬಾಧೆ ಸಹ ಕಾಣುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ.

* ತಡವಾಗಿ ಬಿತ್ತಿದ ಜೋಳದಲ್ಲಿ ಬೆಂಕಿ ಹುಳು ಬಾಧೆ ಸಹ ಹೊಡೆ ಹೀರುವ ಹಂತದಲ್ಲಿ ಕಾಣಿಸಬಹುದು.

* ಈ ಎಲ್ಲಾ ಕಾರಣಗಳಿಂದ ಬೆಳೆಗಳ ನಿಯತ ಪರಿವೀಕ್ಷಣೆ ಮತ್ತು ನಿಯತ ಕಾಲಾಂತರದಲ್ಲಿ ತೇವಾಂಶಕ್ಕೆ ತಕ್ಕಂತೆ (ತಜ್ಞರ ಸಲಹೆಯಂತೆ) ಪೋಷಕಾಂಶ ಸಿಂಪಡಣೆ ಅತ್ಯಗತ್ಯ.

**ನಸುಕಿನ ಮಳೆಯಿಂದ ಹೂವಾಡುವ ಹಂತದ ಭತ್ತದ ಬೆಳೆಯಲ್ಲಿ ಕಾಳು ಬಣ್ಣ ಕೆಡುವ ರೋಗದ ಬಾಧೆ ಸಾಧ್ಯತೆ ಹೆಚ್ಚಾಗುವುದರಿಂದ ಹತೋಟಿ ಕ್ರಮ :**

* ನಾಟಿ ಅಥವಾ ಬಿತ್ತನೆ ಮಾಡಿದ 20-30 ದಿನದ ನಂತರ ಪ್ರತಿ ಎರಡು ವಾರಗಳಿಗೊಮ್ಮೆ ಸಗಣಿ ರಾಡಿ ಪ್ರತಿ ಗದ್ದೆಗೆ ಹಾಯಿಸಬೇಕು.

* ಬೆಳೆಯು ಹೊಡೆ ಹಿರಿಯುವ ಹಂತದಲ್ಲಿರುವಾಗ 1 ಮಿಲೀ ಪ್ರೊಪಿಕೊನಾಜೋಲ್, 1 ಮಿಲೀ ಹೆಕ್ಸಾಕೊನಾಜೋಲ್, 0.6 ಗ್ರಾಂ ನೇಟಿವೋ, 0.5 ಗ್ರಾಂ ಕಸ್ಟೋಡಿಯ, 2 ಗ್ರಾಂ ಸಾಫ್ ಇವುಗಳಲ್ಲಿ ಒಂದನ್ನು ಮಾತ್ರ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿದ ದ್ರಾವಣವನ್ನು ಬೆಳೆಯ ಮೇಲೆ ಚೆನ್ನಾಗಿ ಸಿಂಪಡಿಸಬೇಕು.

# ಯುರೋಪ್ ಮಾದರಿಯಲ್ಲಿ ಪ್ರಮುಖ ವೃತ್ತಗಳ ಅಭಿವೃದ್ಧಿ

**(1ನೇ ಪುಟದಿಂದ)** ವೃತ್ತಗಳನ್ನು ಯುರೋಪ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ ಯೋಜನೆ ರೂಪಿಸಲಾಗುವುದು ಎಂದು ಹೇಳಿದರು.



ಕಳೆದ ಹದಿನೈದು ದಿನಗಳ ಹಿಂದೆ ಬಂದು ಇಲ್ಲಿ ಗುದ್ದಲಿ ಪೂಜೆ ನೆರವೇರಿಸಿದ್ದೆ. ಈಗ ಮತ್ತೆ ಬಂದಿದ್ದೇನೆ. ಕಾಂಗ್ರೆಸ್ ಅಧಿಕಾರವಧಿಯಲ್ಲಿ ಅನೇಕ ಕೆಲಸಗಳು ಆಗಿವೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ನಿಮ್ಮ ಸಹಕಾರ, ಪ್ರೋತ್ಸಾಹ ಎಂದಿನಂತೆ ಇರಲಿ ಎಂದು ಹೇಳಿದರು.

ಈ ಭಾಗದ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ಎಂಸಿಸಿ 'ಬಿ' ಬ್ಲಾಕ್‌ಗೆ ಹೆಚ್ಚಿನ ಅನುದಾನವನ್ನು ಎಸ್.ಎಸ್. ಮಲ್ಲಿಕಾರ್ಜುನ್ ಅವರು ನೀಡಿದ್ದಾರೆ. ಮುಂದೆಯೂ ನೀಡುವ ವಿಶ್ವಾಸ ಇದೆ. ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಾರ್ಡ್‌ಗಳಿಗಿಂತ ಸುಂದರ ಬಡಾವಣೆಯನ್ನಾಗಿಸಲು ಎಲ್ಲಾ ರೀತಿಯ ಸಹಕಾರವನ್ನು ಎಸ್ಸೆಸ್ಸೆಂ ನೀಡಿದ್ದಾರೆ. ಅವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಕುಂದುವಾಡ ಕೆರೆ ಆಗುವ ಮುನ್ನ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಇತ್ತು. ಇದನ್ನು ಮನಗಂಡ ಮಲ್ಲಿಕಾರ್ಜುನ್ ಅವರು, ಕೆರೆ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಅನುದಾನ ತಂದರು. ಹಾಗಾಗಿ, ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗಿದೆ. ಜೊತೆಗೆ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತಿದ್ದು, ಜನರಿಗೆ ತುಂಬಾನೇ ಅನುಕೂಲವಾಗಿದೆ ಎಂದು ತಿಳಿಸಿದರು.

ಕಾಸಲ್ ವಿಠ್ಠಲ್ ಪಾರ್ಕ್ ಅಭಿವೃದ್ಧಿಗೆ 1 ಕೋಟಿ ರೂ., ಸ್ವಿಮ್ಮಿಂಗ್ ಪೂಲ್ ಅಗಲೀಕರಣ ಉದ್ಘಾಟನೆ, ಮಿನಿ ಸ್ವಿಮ್ಮಿಂಗ್ ಪೂಲ್‌ಗೆ ಅನುದಾನ ನೀಡಲಾಗಿದೆ. ಡಿಜಿಟಲ್ ಗ್ರಂಥಾಲಯಕ್ಕೂ ಹಣ ಬಿಡುಗಡೆ ಮಾಡಲಾಗುತ್ತಿದ್ದು, ಅಭಿವೃದ್ಧಿಯ ಮಹಾಪೂರವೇ ವಾರ್ಡ್‌ನಲ್ಲಿ ಹರಿದು ಬರುತ್ತಿದೆ. ಇದಕ್ಕೆ ಮಲ್ಲಿಕಾರ್ಜುನ್ ಅವರ ದೂರದೃಷ್ಟಿತ್ವದ ನಾಯಕತ್ವ, ಅಭಿವೃದ್ಧಿ ಪರ ಚಿಂತನೆಯೇ ಕಾರಣ ಎಂದು ಹೇಳಿದರು.

ಎಸ್. ಎಸ್. ಮಲ್ಲಿಕಾರ್ಜುನ್ ಅವರು ನಮಗೆಲ್ಲರಿಗೂ ಮಾರ್ಗದರ್ಶಕರು. ಅಭಿವೃದ್ಧಿ ವಿಚಾರ ಬಂದಾಗ ಎಂದಿಗೂ ರಾಜೀ ಆದವರಲ್ಲ. ಹಾಗಾಗಿ, ದಾವಣಗೆರೆಯಲ್ಲಿ ಮತ್ತೆ ಅಭಿವೃದ್ಧಿ ಕಾರ್ಯಗಳಿಗೆ ವೇಗ ಸಿಗುತ್ತಿದ್ದು, ಮುಂದೆ ಮತ್ತಷ್ಟು ಅಭಿವೃದ್ಧಿ ಕಾರ್ಯಗಳಾಗಲಿವೆ. ಜನರು ಕೆಲಸ ಮಾಡುವವರಿಗೆ ಪ್ರೋತ್ಸಾಹ ನೀಡಿದರೆ ಹೆಚ್ಚಿನ ಅಭಿವೃದ್ಧಿ ಮಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಉಪಮೇಯರ್ ಸೋಗಿ ಶಾಂತಕುಮಾರ್, ಆಯುಕ್ತ ರಾದ ರೇಣುಕಾ, ಅಂದನೂರು ಮುಪ್ಪಣ್ಣ, ಗುರು ಮೂರ್ತಿ, ಇಂದೂಧರ್ ನಿಶಾನಿಮಠ್, ವಿಜಯಣ್ಣ ಆಲೂರು, ವೀರಣ್ಣ ಬೆಳ್ಳೂಡಿ, ಜ್ಯೋತಿರ್ಲಿಂಗ, ಮುರುಗೇಶ್, ಗುರು, ಕಬ್ಬೂರು ಶಿವಕುಮಾರ್, ಸಿದ್ದೇಶ್ವರ ಗೌಡ, ಯಶೋಧ, ಸರೋಜಮ್ಮ, ಪರಶುರಾಮ್ ಭರಣಿ, ಮಲ್ಲಿಕಾರ್ಜುನ್, ಭರತ್, ಜಾವಿದ್ ಸಾಬ್, ಮಲ್ಲಿಕಾರ್ಜುನ್ ಸ್ವಾಮಿ, ಬೆಳ್ಳೂಡಿ ಉಮೇಶ್, ಆರ್.ಟಿ. ಓ ರಾಜು, ಜಬ್ಬಾರ್ ಸಾಬ್, ನಿಖಿಲ್, ನೀಲಕಂಠಪ್ಪ, ರೆಡ್ಡಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮಿನಿ ಸಮರಕ್ಕೆ ದಿನ ನಿಗದಿ

**(1ನೇ ಪುಟದಿಂದ)** ಪರಿಶೀಲನೆ ನಡೆಯಲಿದೆ. ಅಕ್ಟೋಬರ್ 30 ರವರೆಗೆ ನಾಮಪತ್ರ ಹಿಂತೆಗೆದುಕೊಳ್ಳಲು ಕಾಲಾವಕಾಶ ನೀಡಲಾಗಿದೆ.

ಉಪಚುನಾವಣೆ ನಡೆಯುತ್ತಿರುವ ಮೂರು ಕ್ಷೇತ್ರಗಳಿಗೂ ಆಡಳಿತಾರೂಢ ಕಾಂಗ್ರೆಸ್, ಎನ್‌ಡಿಎ ಮೈತ್ರಿಕೂಟದ ಬಿಜೆಪಿ ಮತ್ತು ಜೆಡಿಎಸ್ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ಒಂದು ಸ್ಥಾನದಲ್ಲಿ ಗೆದ್ದಿದ್ದವು.

ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೂ ಮುನ್ನವೇ ರಾಜಕೀಯ ಪಕ್ಷಗಳು ಕ್ಷೇತ್ರಗಳಲ್ಲಿ ಕಾರ್ಯಕರ್ತರ ಸಭೆ ನಡೆಸಿದರೆ, ಆಡಳಿತಾರೂಢ ಕಾಂಗ್ರೆಸ್ ಅಭಿವೃದ್ಧಿಗೆ ಹಣವನ್ನು ಹರಿಸಿದ್ದಲ್ಲದೆ, ಬೃಹತ್ ಸಮಾವೇಶಗಳನ್ನು ನಡೆಸಿದೆ.

ಚನ್ನಪಟ್ಟಣದಿಂದ ಲೋಕಸಭೆಗೆ ಆಯ್ಕೆಗೊಂಡ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿಗೆ ಈ ಕ್ಷೇತ್ರ ಪ್ರತಿಷ್ಠೆಯಾಗಿದೆ. ಈ ಕ್ಷೇತ್ರ ತಮಗೂ ಬೇಕೆಂದು ಬಿಜೆಪಿ ಒಂದು ವರ್ಗದ ನಾಯಕರು ಪಟ್ಟು ಹಿಡಿದಿದ್ದಾರೆ.

ಆದರೆ ಎನ್‌ಡಿಎ ಮೈತ್ರಿ ಕೂಟದ ಪಾಲುದಾರಿಕೆ ಜೆಡಿಎಸ್‌ಗೆ ಚನ್ನಪಟ್ಟಣ ಕ್ಷೇತ್ರ ಬಿಟ್ಟುಕೊಟ್ಟಿದ್ದಾರೆ. ಉಳಿದ ಶಿಗ್ಗಾಂವಿ ಮತ್ತು ಸಂಡೂರು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿ ಕಣಕ್ಕಿಳಿಯಲಿದ್ದಾರೆ. ಕಾಂಗ್ರೆಸ್ ಮೂರು ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ.

ಉಪಚುನಾವಣೆ ವೇಳಾಪಟ್ಟಿ ಪ್ರಕಟಗೊಂಡಿರುವುದರಿಂದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯನವರ ರಾಜೀನಾಮೆ ವಿಚಾರವಾಗಿ ಆಂತರಿಕವಾಗಿ ನಡೆಯುತ್ತಿದ್ದ ಗೊಂದಲಗಳಿಗೆ ತಾತ್ಕಾಲಿಕ ಬ್ರೇಕ್ ಬಿದ್ದಂತಾಗಿದೆ.

## ನ.20ರಂದು ಚುನಾವಣೆ

**(1ನೇ ಪುಟದಿಂದ)**
ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. 48 ವಿಧಾನಸಭಾ ಕ್ಷೇತ್ರ ಹಾಗೂ ಎರಡು ಲೋಕಸಭಾ ಕ್ಷೇತ್ರಗಳಿಗೆ ಇದೇ ಅವಧಿಯಲ್ಲಿ ಉಪಚುನಾವಣೆಗಳು ನಡೆಯಲಿವೆ. ಮಹಾರಾಷ್ಟ್ರದಲ್ಲಿ ಬಿಜೆಪಿ, ಶಿವಸೇನೆ ಹಾಗೂ ಎನ್.ಸಿ.ಪಿ. ಮೈತ್ರಿಕೂಟದ ಸರ್ಕಾರ ಅಧಿಕಾರದಲ್ಲಿದೆ. ಜಾರ್ಖಂಡ್‌ನಲ್ಲಿ ಜೆ.ಎಂ.ಎಂ. ನೇತೃತ್ವದ ಮೈತ್ರಿಕೂಟ ಅಧಿಕಾರ ನಡೆಸುತ್ತಿದೆ.

# ಅಮೆರಿಕದಿಂದ 4 ಶತಕೋಟಿ ಡಾಲರ್ ವೆಚ್ಚದಲ್ಲಿ ಡ್ರೋನ್ ಖರೀದಿ

ನವದೆಹಲಿ, ಅ. 15 - ಅಮೆರಿಕದಿಂದ 31 ಪ್ರೆಡೇಟರ್ ದೂರಗಾಮಿ ಡ್ರೋನ್ ಖರೀದಿಗೆ ಭಾರತ ಒಪ್ಪಂದ ಮಾಡಿಕೊಂಡಿದೆ. ಸೈನಿಕ ಮಾರಾಟ ಮಾರ್ಗದ ಮೂಲಕ 4 ಶತಕೋಟಿ ಡಾಲರ್ ವೆಚ್ಚದಲ್ಲಿ ಇವುಗಳ ಖರೀದಿ ಮಾಡಲಾಗುವುದು. ಇದರಿಂದ ಚೀನಾಗೆ ಹೊಂದಿಕೊಂಡಿರುವ ಗಡಿಯಲ್ಲಿ ರಕ್ಷಣೆ ಬಲವಾಗುವ ನಿರೀಕ್ಷೆ ಇದೆ. ಉನ್ನತ ರಕ್ಷಣಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ಖರೀದಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಇದು ಉಭಯ ದೇಶಗಳ ನಡುವಿನ ಸೈನಿಕ ಸಹಭಾಗಿತ್ವ ಹೆಚ್ಚಾಗುತ್ತಿರುವ ಉದಾಹರಣೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ವಕ್ಫ್ ಸಮಿತಿಯಲ್ಲಿ ನಿಯಮ ಉಲ್ಲಂಘನೆ, ದೂರು

ನವದೆಹಲಿ, ಅ. 15 – ವಕ್ಫ್ (ತಿದ್ದುಪಡಿ) ಮಸೂದೆ ಕುರಿತ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಂಬಿಕ ಪಾಲ್ ಅವರು ಸಮಿತಿ ಸಭೆಯ ವೇಳೆ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಪ್ರತಿಪಕ್ಷಗಳ ಸಂಸದರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಸಮಿತಿ ಸಭೆಯಲ್ಲಿ ವಕ್ಫ್ ಆಸ್ತಿ ಕಬಳಿಕೆಯ ಆರೋಪ ಮಾಡಿದ್ದರು. ನಂತರ ಪ್ರತಿಪಕ್ಷಗಳ ಸಂಸದರು ಸಭೆಯಿಂದ ಹೊರ ನಡೆದಿದ್ದರು.

ಈ ಬಗ್ಗೆ ಲೋಕಸಭಾಧ್ಯಕ್ಷರಿಗೆ ಪತ್ರ ಬರೆದಿರುವ ಪ್ರತಿಪಕ್ಷಗಳ ಸದಸ್ಯರು, ಸಮಿತಿಯ ಸಭೆಯನ್ನು ಪಕ್ಷಪಾತಿಯಾಗಿ ನಡೆಸಲಾಗುತ್ತಿದೆ ಎಂದು ದೂರಿದ್ದಾರೆ.

ಈ ಪತ್ರಕ್ಕೆ ಪ್ರತಿಪಕ್ಷಗಳ ಸದಸ್ಯರಾದ ಗೌರವ್ ಗೊಗೊಯ್, ಸೈಯದ್ ನಸೀರ್ ಹುಸೇನ್, ಇಮ್ರಾನ್ ಮಸೂದ್, ಎ.ರಾಜಾ ಮತ್ತಿತರರು ಸಹಿ ಹಾಕಿದ್ದಾರೆ.

ಮಾಣಿಪ್ಪಾಡಿ ಅವರು 2012ರಲ್ಲಿ ಕರ್ನಾಟಕದಲ್ಲಿ ವಕ್ಫ್ ಆಸ್ತಿ ಕಬಳಿಕೆಯ ಕುರಿತು ವರದಿಯೊಂದನ್ನು ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಅವರಿಂದ ಮಾಹಿತಿ ಪಡೆಯಲು ಸಮಿತಿ ಎದುರು ಕರೆಯಲಾಗಿತ್ತು.

# ಮಲೇಬೆನ್ನೂರಿನಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಮಲೇಬೆನ್ನೂರು, ಅ.15- ಪಟ್ಟಣದ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ಕಳೆದ ವಾರ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಶಾಸಕ ಬಿ.ಪಿ. ಹರೀಶ್ ಚಾಲನೆ ನೀಡಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಹರಿಹರ ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಜಿಗಳೇರ ಹಾಲೇಶಪ್ಪ, ಓ. ಜಿ. ಕುಮಾರ್, ಮುಖಂಡರಾದ ಮುದೇಗೌಡ್ರ ತಿಪ್ಪೇಶ್, ತಳಸದ ರೇವಣಸಿದ್ದಪ್ಪ, ಆನಂದ ಚಾರ್, ಜಿ.ಪಿ. ಹನುಮಗೌಡ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.


**ಮನೆ ಬಾಡಿಗೆಗೆ ಇದೆ**
# 696/20, ಶ್ರೀನಿವಾಸ ನಗರ 10ನೇ ಕ್ರಾಸ್ 20x30 ಉತ್ತರ ಬಾಗಿಲು ನೀರಿನ ಸೌಲಭ್ಯ ಇದೆ. [2 BHK] ಹದಡಿ ರೋಡ್, ದಾವಣಗೆರೆ
ಮೊ: 98800 68009

**ಮನೆ ಬೇಕಾಗಿದೆ**
2BHK or 3BHK Independent ಮನೆ ಬೇಕಾಗಿದೆ.
9008917697

**ಸೈಟು ಮಾರಾಟಕ್ಕೆ ಇದೆ**
ಡಾಲರ್ಸ್ ಕಾಲೋನಿ 30x60 ಪೂರ್ವಕ್ಕೆ (ಸೆಮಿ ಕಮರ್ಷಿಯಲ್) 30x30 ದಕ್ಷಿಣ ಸೈಟು ಮಾರಾಟಕ್ಕಿದೆ.
ಸುರೇಶ್ 95911 60520

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ. 20x45 ಪೂರ್ವ, ದರ 2,250/-, 20x45 ಪೂರ್ವ, ದರ 2,250/-, 20x30 ಪೂರ್ವ, ದರ 2,150/-, 40x45 ಪೂರ್ವ-ಉತ್ತರ ಕಾರ್ನರ್ ಸೈಟು. ದರ 2,250/- ಬ್ಯಾಂಕ್ ಲೋನ್ ಆಗುತ್ತದೆ.
ಮೊ : 9740258276

**ಬೇಕಾಗಿದ್ದಾರೆ**
ಕಾಫೀ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ
ಎ.ಎನ್.ಎಸ್. ಫುಡ್ಸ್ ಮಂಡಿಪೇಟೆ, ದಾವಣಗೆರೆ.
94482 72734

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಪಾಳೆಯದಲ್ಲಿ ಕೆಲಸ ಮಾಡಲು ರಿಸೆಪ್ಷನಿಸ್ಟ್/ Computer Operator ಬೇಕಾಗಿದ್ದಾರೆ. 40 ವರ್ಷ ಮೇಲ್ಪಟ್ಟ ಪುರುಷರು ಸಂಪರ್ಕಿಸಿ :
ಮೊ : 98451 51589

**ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಫ್ಲಾಟ್ ಲೀಸ್‌ಗೆ ಇವೆ. ಸಂಪರ್ಕಿಸಿ
99807 28533

**ಸೈಟು ಮಾರಾಟಕ್ಕಿದೆ**
54x40 ದಕ್ಷಿಣಮುಖ ಡೋರ್ ನಂ. ಇರುವ ಸೈಟ್ ಶ್ರೀನಿವಾಸ ನಗರ, 4ನೇ ಕ್ರಾಸ್.
83105 03746

**ಸೈಟುಗಳು ಮಾರಾಟಕ್ಕಿವೆ**
ಶಂಕರ್ ವಿಹಾರ ಬಡಾವಣೆ, ದಾವಣಗೆರೆ. 47x30 ಕಾರ್ನರ್ ಪೂರ್ವ, ಉತ್ತರ. ಸಂಪರ್ಕಿಸಿ :
99807 56654

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ
ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ.
ವಯಸ್ಸು : 25 ರಿಂದ 40ರ ಒಳಗೆ
ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
ಪರಿಮಳ ಕಾಫೀ ಕಂಪನಿ, ಮಂಡಿಪೇಟೆ, ದಾವಣಗೆರೆ.
94482 72734

**ಗಾರ್ಮೆಂಟ್ಸ್‌ಗೆ ಬೇಕಾಗುವ ಮಷೀನ್‌ಗಳು ಮಾರಾಟಕ್ಕಿವೆ**
ಹೈಸ್ಪೀಡ್ ಮಷೀನ್‌ಗಳು -4
ಜಾಕ್ ಬಟನ್ ಮಷೀನ್ -1
ಬಟನ್ ಹೋಲ್ ಮಷೀನ್ -1
ಓವರ್‌ಲಾಕ್ ಮಷೀನ್ -1
ಸಂಪರ್ಕಿಸಿ :
99723 61281

**SITES FOR SALE**
30x45 size at Karur village, DUDA approved
Contact : Bhuvi.com
91489 09259

**Reputed Footware Company showroom**
Requires Sales Executuve-1 Post.
Qual : SSLC/PUC
LIBERTY SHOES LTD.,
Opp. SS mall, Shamanur Road, Davangere.
99019 44554, 98801 56060

**COMMERCIAL SITE**
at Vidyanagar Bypass for sale (4500 Sqft) Financial Assistance available. Conatct :
91489 09259

**ರೂಂಗಳು ಭೋಗಕ್ಕೆ ಇರುತ್ತವೆ**
2ನೇ ಮಹಡಿಯಲ್ಲಿ (ಎಸ್. ಎಸ್ ಆಸ್ಪತ್ರೆ ಹತ್ತಿರ) 2 ರೂಂ ಗಳು ಭೋಗ್ಯಕ್ಕೆ ಇರುತ್ತವೆ (ಪ್ರತ್ಯೇಕವಾದ ಸೋಲಾರ್) ಬೋರ್ ಹಾಗು ನಗರ ಸಭೆಯ ನೀರಿನ ಸಂಪರ್ಕ ಹೊಂದಿರುತ್ತವೆ. 791/3-191 ಜಯನಗರ ಎ ಬ್ಲಾಕ್ ದಾವಣಗೆರೆ. ಸಂಪರ್ಕಿಸಿ :
94489 65819, 99801 83670

**ಒಕ್ಕಲಿಗ ಗೌಡ ಜಾತಿಯ ವಧು ಬೇಕಾಗಿದೆ**
ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಉದ್ಯೋಗದಲ್ಲಿರುವ ಒಕ್ಕಲಿಗ ಗೌಡ ಜಾತಿಯ ವರನಿಗೆ ಒಕ್ಕಲಿಗ ಗೌಡ ಜಾತಿಯ ವಧು ಬೇಕಾಗಿದೆ.
95917 25892

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಆಟೋ ಮೊಬೈಲ್ಸ್ ಅಂಗಡಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
73380 33337

**ಬೇಕಾಗಿದ್ದಾರೆ**
ಪಾರ್ಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
98809 55777

**Sale of Furniture & interior lighting etc**
Vehicle showroom aluminium partition lighting etc. & Material sale for interior decoration lighting etc
For detail contact :
M : 98445 55551

**ತಕ್ಷಣ ಬೇಕಾಗಿದ್ದಾರೆ**
PUC ಪಾಸ್ / 25 ವರ್ಷದೊಳಗಿನ ಯುವಕ, ಯುವತಿಯರು ದಾವಣಗೆರೆ ನ್ಯೂರೋಥೆರಪಿ ಕೇಂದ್ರದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಆಸಕ್ತರು ಇಂದೇ ಸಂಪರ್ಕಿಸಿ.
99726 00713

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**LEARN PROGRAMMING**
`C' Language, OOP'S with C++
Niyam Computers
PJ Extn. Davanagere
Call for more Info :
90367 19573

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿಜೆ ಬಡಾವಣೆ, ದಾವಣಗೆರೆ.

**WANTED**
Urban money (Corporate loan DSA) is looking for a Sales professional
- Tele sales executive (Female) - 4 post
- Relationship manager Males - 5 Post
- Sales manager -1 post
- Backend team (Operations - Female) -1 Post
Contact - Santhosh
99805 70746

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡಲು (ವಯೋವೃದ್ಧರನ್ನು ನೋಡಿಕೊಳ್ಳಲು) ಮಹಿಳೆಯರು, ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, 10th PUC, ANM, GNM, Any Degree ಉಚಿತ ಊಟ, ವಸತಿಯೊಂದಿಗೆ 18,000 ರೂ. ನಿಂದ 20,000 ರೂ. ಸಂಬಳವಿದೆ. ಆಸಕ್ತಿ ಇರುವವರು ಸಂಪರ್ಕಿಸಿ.
95355 32369

**Requirement**
Receptionist (only female)
Age: 20-25, Salary: 10000 - 12000
HAIRPOINT SALON
MCC `B' block, 7th main 3rd cross, Davanagere.
9148319342, 9738664400
08192220755

**WANTED**
WORKING PHARMACIST
Qualification : D Pharma/B Pharma
Age : Below 40 Years
Scale : Rs. 16000 to 18200/- (ESI+PF+Incentive)
90355 03140

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಶಾಕಿರ ಬ್ಯೂಟಿ ಪಾರ್ಲರ್**
10th main, PJ Extn, Davanagere, ಮನೆ ಕೆಲಸ ಮತ್ತು ಕ್ಲಿನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
93420 19013

**ತಕ್ಷಣ ಬೇಕಾಗಿದ್ದಾರೆ**
ಟಯೋಟಾ, ಟಿ.ವಿ.ಎಸ್. ಬ್ರಿಟಾನಿಯಾ, ಟಾಟಾ ಮೋಟಾರ್ಸ್‌ಗಳಿಗೆ SSLC, PUC, Degree, ITI, Diplomaದವರು 18,100/-, 76000/- (ವಿದ್ಯಾರ್ಹತೆಯಯಿಲ್ಲದವರಿಗೂ) ವಸತಿ ಮತ್ತು ಊಟವಿದೆ.
72595 52930

**ಶ್ರೀ ಸಾಯಿ ಫೈನಾನ್ಸ್ (ರಿ)**
ಫುಲ್ ಟೈಂ / ಪಾರ್ಟ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ.
ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಆಸಕ್ತಿಯುಳ್ಳವರು ಸಂಪರ್ಕಿಸಿ.
96860 22969

**WANTED**
Fresher's or Learner's For Auditor Office (Gents Only)
86180 47131

**CHANGE OF NAME**
ABDUL JABBAR (old name) S/o SHAIK AHAMED SAB Resident of # 303/2, 2nd cross, Narasaraja pete, Davangere-577 001. Davangere Dist. Karnataka Has Changed my name as KARLAHALLI ABDUL JABBAR Vide affidavit dated 15.10.2024 sworn before Notary. I.P. Brahmakumar, Davangere. Henceforth all my transactions and dealings will be in my new name KARLAHALLI ABDUL JABBAR
Sd/- KARLAHALLI ABDUL JABBAR

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಆಕರ್ಷಕ ಸಂಬಳದೊಂದಿಗೆ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98448 18900, 70227 92613
98448 08903

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

# ಬಿಜೆಪಿ ಸರ್ಕಾರದಿಂದ ಬ್ರಿಟಿಷರ ನೀತಿ ಅನುಷ್ಠಾನ : ಬಿಳಿಮಲೆ ಕಳವಳ



ದಾವಣಗೆರೆ, ಅ. 15- ಪ್ರಸ್ತುತ ದೇಶದಲ್ಲಿ ಬಿಜೆಪಿ ಸರ್ಕಾರ ಬ್ರಿಟಿಷರ ನೀತಿಯನ್ನು ಅನುಷ್ಠಾನಕ್ಕೆ ತರುತ್ತಿರುವುದು ದುರಂತದ ಸಂಗತಿ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಮತ್ತು ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಪರಸ್ಪರ ಬಳಗ ಹರಿಹರ ಹಾಗೂ ಮಾನವ ಬಂಧುತ್ವ ವೇದಿಕೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೇಖಕ ಜೆ. ಕಲೀಂಬಾಷಾ ಅವರು ಅನುವಾದಿಸಿರುವ 'ಕ್ರಾಂತಿಕಾರಿ ಸ್ವಾತಂತ್ರ್ಯ ಹುತಾತ್ಮ ಕವಿ ರಾಮಪ್ರಸಾದ್ ಬಿಸ್ಮಿಲ್ಲಾ (ಆತ್ಮಕಥೆ)' ಕೃತಿ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿದವರು ಮುಸ್ಲಿಮರು. ಆದರೆ ಇತಿಹಾಸದಲ್ಲಿ ಈ ಬಗ್ಗೆ ಸರಿಯಾಗಿ ದಾಖಲಾಗಿಲ್ಲ. ದೇಶದ ಸ್ವಾತಂತ್ರ್ಯಕ್ಕೆ ಮುಸ್ಲಿಮರ ಕೊಡುಗೆ ಅಪಾರವಾದುದು. ಬ್ರಿಟಿಷರು ಮತ್ತು ಇಂಗ್ಲಿಷ್ ಭಾಷೆಯನ್ನು ಏಕಕಾಲಕ್ಕೆ ವಿರೋಧಿಸಿದವರು ಮುಸ್ಲಿಮರು ಎಂದರು.

ಬಹುತೇಕ ಮುಸ್ಲಿಮರು ಆಂಗ್ಲ ಮಾಧ್ಯಮ ಶಾಲೆಗೆ ಸೇರಲೇ ಇಲ್ಲ. ಇವರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಸರಿಯಾದ ನ್ಯಾಯ ದೊರಕಿಲ್ಲ. ಮೊಘಲರ ಕೊನೆಯ ದೊರೆ ಬಹದ್ದೂರ್ ಷಾ ಜಾಫರ್‌ನನ್ನು ಕೊಂದು ಹಾಕಿದರು. ಸರ್ಕಾರದ ಪ್ರಮುಖ ಹುದ್ದೆಗಳಿಗೆ ಮುಸ್ಲಿಮರು ಬಾರದಂತೆ ಬ್ರಿಟಿಷರು ಎಚ್ಚರ ವಹಿಸಿದ್ದರು. ಉರ್ದು ಭಾಷೆ ಬದಲು ಹಿಂದಿ ಭಾಷೆಗೆ ಆದ್ಯತೆ ನೀಡಲಾಯಿತು. ಮುಸ್ಲಿಂ ಸಮುದಾಯಕ್ಕೆ ಬಹುದೊಡ್ಡ ಆಘಾತವನ್ನುಂಟು ಮಾಡಿತು ಎಂದು ಹೇಳಿದರು.

ಬಿಜೆಪಿ ಸರ್ಕಾರದಲ್ಲಿ ಆಡಳಿತಾತ್ಮಕ ಸೇವೆಗೆ ಮುಸ್ಲಿಮರು ಬರದಂತೆ ನೋಡಿಕೊಳ್ಳುವ ವ್ಯವಸ್ಥಿತ ಸಂಚು ರೂಪಗೊಳ್ಳುತ್ತಿದೆ. ಸ್ವಾತಂತ್ರ್ಯ ಹೋರಾಟದ ಬಗ್ಗೆ ಸುಳ್ಳುಗಳನ್ನೇ ಸೃಷ್ಟಿಸಿ ಹೇಳಲಾಗುತ್ತಿದೆ. 75 ವರ್ಷಗಳ ಹಿಂದೆ ದೇಶದಲ್ಲಿ ಏನು ನಡೆಯಿತು ಎಂಬುದರ ಬಗ್ಗೆ ಯುವ ಜನಾಂಗಕ್ಕೆ ಅರಿವಿಲ್ಲ. ಆದರೆ ಸಾವಿರಾರು ವರ್ಷಗಳ ಹಿಂದಿನ ಅಯೋಧ್ಯೆ ಬಗ್ಗೆ ಮಾತನಾಡುತ್ತಾರೆ ಎಂದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ವೇಳೆ 22 ಭಾಷೆಗಳಲ್ಲಿ ಪುಸ್ತಕಗಳನ್ನು ಹೊರ ತರುವ ಪ್ರಯತ್ನ ನಡೆಯಿತು. ತೆರೆ ಮರೆಯಲ್ಲಿರುವ ಹೋರಾಟಗಾರರ ಮೇಲೆ ಬೆಳಕು ಚೆಲ್ಲುವುದು ಇದರ ಉದ್ದೇಶವಾಗಿತ್ತು ಎಂದು ತಿಳಿಸಿದರು.

ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ.ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಕರ್ನಾಟಕದಲ್ಲಿ ಬಂಡಾಯ ಸಾಹಿತ್ಯ, ಕೃತಿಕಾರ ಹಾಗೂ ಸಾಮಾಜಿಕ ಸಂಬಂಧ ಪರಸ್ಪರವಾಗಿರಬೇಕೆಂದು ತೋರಿಸಿದೆ. ಇವತ್ತು ದೇಶಪ್ರೇಮದ ವ್ಯಾಖ್ಯಾನವೇ ಬದಲಾಗುತ್ತಿದೆ. ಸತ್ಯ ಮರೆಮಾಚಿ, ಅಸತ್ಯವೇ ಸತ್ಯ ಎಂದು ಬಿಂಬಿಸಲಾಗುತ್ತಿದೆ ಎಂದರು.

ಇಡೀ ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ಶೇ. 90 ರಷ್ಟು ಜನರು ಬ್ರಿಟಿಷರ ವಿರುದ್ಧ ನಿಂತಿದ್ದವರು ಎಂಬುದನ್ನು ಯಾರು ಮರೆಯಬಾರದು. ರಾಷ್ಟ್ರೀಯತೆಯ ವ್ಯಾಖ್ಯಾನವನ್ನೇ ಬದಲಾಯಿಸಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಾಮಾಜಿಕ ಸಾಮರಸ್ಯದ ಭಾರತವನ್ನು ಮರು ನಿರ್ಮಾಣ ಮಾಡುವ ಜವಾಬ್ದಾರಿ ಸಾಹಿತ್ಯ ವಲಯದ ಮೇಲಿದೆ ಎಂದು ಹೇಳಿದರು.

ಬಿಸ್ಮಿಲ್ಲಾ ನಂತಹ ಲಕ್ಷಾಂತರ ಹೋರಾಟಗಾರರು ದೇಶದಲ್ಲಿದ್ದಾರೆ. ಒಂದು ದೇಶ, ಒಂದು ಸಂಸ್ಕೃತಿಯಂತಹ ಪರಿಕಲ್ಪನೆ ಪ್ರತಿಪಾದಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಇಂತಹ ಕೃತಿಗಳ ಅವಶ್ಯವಿದೆ ಎಂದರು.

ವಿಶ್ರಾಂತ ಪ್ರಾಚಾರ್ಯ ಡಾ. ದಾದಾಪೀರ್ ನವಿಲೇಹಾಳ್ ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಪ್ರವೇಶದ ಬಳಿಕ ಸ್ವಾತಂತ್ರ್ಯ ಹೋರಾಟಕ್ಕೆ ನೈತಿಕ ತಳಹದಿ ಹಾಗೂ ಆಯಾಮ ದೊರೆಯಿತು. ಸ್ವಾತಂತ್ರ್ಯ ಹೋರಾಟದ ಕಥೆ ಮಹಾಕಾವ್ಯವನ್ನು ಮೀರಿಸುತ್ತದೆ ಎಂದರು.

30 ವರ್ಷಕ್ಕೆ ಬಲಿದಾನವಾದ ರಾಮಪ್ರಸಾದ್ ಬಿಸ್ಮಿಲ್ಲಾ ಯುವ ಪೀಳಿಗೆಗೆ ಮಾದರಿ. ಆದರೆ ಇಂದಿನ ಪೀಳಿಗೆಗೆ ಮಾದರಿಗಳೇ ಇಲ್ಲ. ಅವರಿಗೆ ಇಂತಹ ಆದರ್ಶಗಳು ತಲುಪಬೇಕಾಗಿದೆ ಎಂದು ಹೇಳಿದರು.

ರಾಷ್ಟ್ರೀಯತೆಗೆ ಬಹುಮುಖ ಆಯಾಮವಿದೆ. ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಎಲ್ಲರನ್ನೂ ಒಳಗೊಳ್ಳಬೇಕು. ಆದರೆ ರಾಷ್ಟ್ರೀಯತೆ ಎಂಬ ಹುಸಿ ಪ್ರಜ್ಞೆ ಬೆಳೆಯುತ್ತಿರುವುದು ಅಪಾಯಕಾರಿ. ರಾಷ್ಟ್ರಭಕ್ತಿ ಸಾಬೀತು ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ದೇಶಭಕ್ತಿ ರಾಜಕೀಯ ಬಂಡವಾಳ ಆಗಿದೆ. ಬಸವಣ್ಣನ ದೃಷ್ಟಿಯಲ್ಲಿ ನಾವು ಬದುಕು ಕಟ್ಟಿಕೊಳ್ಳಬೇಕಿದೆ. ಎಲ್ಲರೂ ಭಾರತೀಯರಾಗಬೇಕಿದೆ ಎಂದರು.

ಇಂದಿನ ಯುವಜನತೆ ಸೃಜನಶೀಲತೆ ನಾಶಪಡಿಸಿಕೊಂಡು, ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಸತ್ಯದ ಪರ ಯುದ್ಧ ಸಾರುವ ಪರಿಸ್ಥಿತಿ ನಿರ್ಮಾಣವಾಗಿದೆ. ನಾಗರಿಕತೆ, ಪ್ರಜಾಪ್ರಭುತ್ವ, ವಿಜ್ಞಾನ, ಮಾನವೀಯ ಗುಣಗಳ ವಿರುದ್ಧ ಸರ್ಕಾರ ಪ್ರೇರಿತ ಸಮರ ನಡೆಯುತ್ತಿದೆ. ಇಂತಹ ಸಂದರ್ಭಗಳಲ್ಲಿ ಹಲವರು ಮೌನಕ್ಕೆ ಶರಣಾಗಿರುವುದು ವಿಷಾದದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಮಂಜಣ್ಣ, ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ವಿಶ್ರಾಂತ ಪ್ರಾಚಾರ್ಯರಾದ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ, ಪ್ರೊ.ಸಿ.ವಿ.ಪಾಟೀಲ್, ಕಾರ್ಮಿಕ ಮುಖಂಡ ಹರಿಹರದ ಹೆಚ್.ಕೆ. ಕೊಟ್ರಪ್ಪ, ರಾಷ್ಟ್ರೀಯ ಕ್ರೀಡಾಪಟು ಹೆಚ್. ನಿಜಗುಣ, ಕೊಪ್ಪಳದ ಮಹೇಶ್ ಬಳ್ಳಾರಿ, ಕಸಾಪ ಪದಾಧಿಕಾರಿಗಳಾದ ರೇವಣಸಿದ್ಧಪ್ಪ ಅಂಗಡಿ, ಜಿಗಳಿ ಪ್ರಕಾಶ್, ವಿವೇಕಾನಂದಸ್ವಾಮಿ, ಜಗದೀಶ್ ಕೂಲಂಬಿ, ರಾಘವೇಂದ್ರ ನಾಯರಿ ಮತ್ತಿತರರು ಭಾಗವಹಿಸಿದ್ದರು.

ದಲಿತ ಸಂಘರ್ಷ ಸಮಿತಿ ಸಂಚಾಲಕ ಹೆಗ್ಗೆರೆ ರಂಗಪ್ಪ, ಬಿ.ಟಿ. ಪ್ರಕಾಶ್, ಕತ್ತಿಗೆ ಪರಮೇಶ್ವರಪ್ಪ ಜಾಗೃತಿ ಗೀತೆಗಳನ್ನಾಡಿದರು. ಹರಿಹರ ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಸ್ವಾಗತಿಸಿದರು. ಬಿ.ಬಿ. ರೇವಣನಾಯ್ಕ ನಿರೂಪಿಸಿದರು.

## ರೈತರಿಂದ 3500 ರೂ.ಗಳಂತೆ ಮುಸುಕಿನ ಜೋಳ ಖರೀದಿಸಬೇಕು

ದಾವಣಗೆರೆ, ಅ.15- ಜಿಲ್ಲೆಯಲ್ಲಿನ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯು ಜಿಲ್ಲಾಧಿಕಾರಿಗಳಿಗೆ ಈಚೆಗೆ ಮನವಿ ಸಲ್ಲಿಸಿತು.

ಈ ವೇಳೆ ರೈತ ಮುಖಂಡರು ಮಾತನಾಡಿ, ಜಿಲ್ಲೆಯಲ್ಲಿ ಅತೀ ಹೆಚ್ಚು ಮೆಕ್ಕೆಜೋಳ ಬೆಳೆಯುತ್ತಿದ್ದು, ಹಾಗಾಗಿ ಕರ್ನಾಟಕ ಹಾಲು ಒಕ್ಕೂಟವು ಪಶುಗಳ ಆಹಾರಕ್ಕಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ರೈತರಿಂದ 3500 ರೂ.ಗಳಂತೆ ಮುಸುಕಿನ ಜೋಳ ಖರೀದಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಆದ ವಿವಿಧ ಬೆಳೆಗಳ ನಷ್ಟಕ್ಕೆ ಸರ್ಕಾರ ತುರ್ತಾಗಿ ಸ್ಪಂದಿಸಿ ಪರಿಹಾರ ಒದಗಿಸಬೇಕು ಮತ್ತು ಕಳೆದ ವರ್ಷದ ಬರ ಪರಿಹಾರ ಮೊತ್ತವನ್ನು ವಿಳಂಬ ಮಾಡದೇ ಕೂಡಲೇ ವಿತರಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಹಾಗೂ ಡೈರಿ ಹಾಲಿನಿಂದ ಬಂದ ಹಣವು ಬ್ಯಾಂಕ್ ಖಾತೆಗೆ ಜಮೆಗೊಳ್ಳುತ್ತಿದ್ದಂತೆ ಸಾಲಕ್ಕೆ ಮುರುಗಡೆ ಮಾಡುತ್ತಿದ್ದು, ಇದನ್ನು ಕೂಡಲೇ ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲೆಯಲ್ಲಿ ಕೇವಲ 527 ಕೆರೆಗಳಿದ್ದು, ಬರಗಾಲದಲ್ಲಿ ನೀರಿನ ಬವಣೆ ತಪ್ಪಿಸಲು ಕೆರೆಗಳ ಸಂಖ್ಯೆಯನ್ನು 1500ಕ್ಕೆ ಏರಿಸುವಂತೆ ಬೇಡಿಕೆ ಇಟ್ಟರು.

ಈ ವೇಳೆ ಸೇನೆಯ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮೀಯ್ಯಾಪುರ ತಿರುಮಲೇಶ್, ಪ್ರಧಾನ ಕಾರ್ಯದರ್ಶಿ ಹೆಬ್ಬಾಳು ರಾಜಯೋಗಿ, ತಾಲ್ಲೂಕು ಕಾರ್ಯಾಧ್ಯಕ್ಷ ಪ್ರತಾಪ್ ಮಾಯಕೊಂಡ, ಪ್ರಧಾನ ಕಾರ್ಯದರ್ಶಿ ಸಾಣೆಕೆರೆ ಟಿ.ಗುರುಮೂರ್ತಿ, ನಾಗರಕಟ್ಟೆ ಜಯನಾಯ್ಕ, ದಶರಥ, ಬಾಡ ಹನುಮಂತಪ್ಪ ಇದ್ದರು.

## ಚನ್ನಗಿರಿ ಉಪ ತಹಶೀಲ್ದಾರ್ ಸುಧಾ ಲೋಕಾಯುಕ್ತರ ಬಲೆಗೆ

ಚನ್ನಗಿರಿ, ಅ.15- ತಾಲ್ಲೂಕಿನ ದೇವರಹಳ್ಳಿ ನಾಡಕಚೇರಿಯ ಉಪ ತಹಶೀಲ್ದಾರ್ ಸುಧಾ ಮೂಡಲಗಿರಿಯಪ್ಪ ಮಂಗಳವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಟ್ರ್ಯಾಕ್ಟರ್ ಖರೀದಿಗೆ ದೃಢೀಕರಣ (ಬೋನಾಫೈಡ್) ಪತ್ರ ನೀಡಲು 1,500 ರೂ. ಲಂಚ ಪಡೆಯುತ್ತಿದ್ದ ವೇಳೆ ಲಂಚದ ಹಣದ ಸಹಿತ ಅವರನ್ನು ಬಂಧಿಸಲಾಗಿದೆ.

ಹಿರೇಗಂಗೂರು ಗ್ರಾಮದ ರೈತ ಎಸ್.ಆರ್.ಕುಮಾರ್ ಟ್ರ್ಯಾಕ್ಟರ್ ಖರೀದಿಗೆ ದೃಢೀಕರಣ ಪತ್ರಕ್ಕೆ ಅರ್ಜಿ ಸಲ್ಲಿಸಿದ್ದರು. ಪತ್ರದ ಹಸ್ತಾಂತರಕ್ಕೆ ಸುಧಾ 2 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮುಂಗಡವಾಗಿ 500 ರೂ. ಪಡೆದುಕೊಂಡಿದ್ದರು. ಲಂಚ ನೀಡಲು ಇಷ್ಟವಿಲ್ಲದ ಕುಮಾರ್, ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಮಂಗಳವಾರ ಲಂಚದ ಉಳಿದ ಹಣವನ್ನು ಪಡೆಯುತ್ತಿದ್ದ ಸಂದರ್ಭದಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

## ಪೋಸ್ಟರ್, ಟಿ-ಶರ್ಟ್ ಬಿಡುಗಡೆ




ದಾವಣಗೆರೆ, ಅ.15- ವಾಲ್ಮೀಕಿ ಜಯಂತ್ಯೋತ್ಸವದ ಪ್ರಯುಕ್ತ ಜನ ಜಾಗೃತಿಗಾಗಿ 7ನೇ ವರ್ಷದ ಬೃಹತ್ ಐತಿಹಾಸಿಕ ಬೈಕ್ ರ್‍ಯಾಲಿಯನ್ನು ನಾಳೆ ದಿನಾಂಕ 16 ರ ಬುಧವಾರ ಬೆಳಿಗ್ಗೆ 10.30ಕ್ಕೆ ನಗರದಲ್ಲಿ ಆಯೋಜಿಸಲಾಗಿದೆ.

ಇದರ ಅಂಗವಾಗಿ ಮಂಗಳವಾರ ನಾಯಕ ವಿದ್ಯಾರ್ಥಿ ನಿಲಯದಲ್ಲಿ ಮಾಜಿ ಶಾಸಕ ಎಸ್. ವಿ. ರಾಮಚಂದ್ರಪ್ಪ ನೇತೃತ್ವದಲ್ಲಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಪೋಸ್ಟರ್ ಹಾಗೂ ಟಿ-ಶರ್ಟ್ ಬಿಡುಗಡೆ ಮಾಡಿದರು.

ಬೈಕ್ ರ್‍ಯಾಲಿಯು ಶ್ರೀ ರಾಜವೀರ ಮದಕರಿ ನಾಯಕ ವೃತ್ತದಿಂದ ಆರಂಭಗೊಳ್ಳಲಿದೆ. ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಪುರಿ ಶ್ರೀಗಳು, ಶಾಸಕ ಬಿ.ದೇವೇಂದ್ರಪ್ಪ, ಶ್ರೀನಿವಾಸ್ ದಾಸಕರಿಯಪ್ಪ, ಆರ್.ಎಸ್.ಶೇಖರಪ್ಪ, ಆಗಮಿಸಲಿದ್ದಾರೆ. ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಸತೀಶ್ ಜಾರಕಿಹೊಳಿ ಪುತ್ರ ರಾಹುಲ್ ಜಾರಕಿಹೊಳಿ, ತಾಲ್ಲೂಕು ನಾಯಕ ಸಮಾಜದ ಅಧ್ಯಕ್ಷ ಹದಡಿ ಹಾಲಪ್ಪ ಮತ್ತಿತರೆ ಸಮಾಜದ ಮುಖಂಡರುಗಳು ಪಾಲ್ಗೊಳ್ಳಲಿದ್ದಾರೆ.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಶ್ಯಾಗಲೆ ಕೆ.ಆರ್. ಮಂಜುನಾಥ್, ನಿರ್ದೇಶಕ ಫಣಿಯಾಪುರ ಲಿಂಗರಾಜ್, ಯುವ ಘಟಕದ ಅಧ್ಯಕ್ಷ ಬಸವರಾಜ್ ತೋಟದ, ಶಾಮನೂರು ಪ್ರವೀಣ್, ಜಗದೀಶ್, ಅಣಜಿಗೆರೆ ಮಲ್ಲಿಕಾರ್ಜುನ, ಪರಶುರಾಮ, ಪ್ರವೀಣ್ ಹೂವಿನಮಡು, ಗೋಶಾಲೆ ಸುರೇಶ್, ಸತೀಶ್, ಅಜಯ್ ಸೇರಿದಂತೆ ಸಮಾಜ ಬಾಂಧವರು ಇದ್ದರು.

## ನಗರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ



ದಾವಣಗೆರೆ, ಅ.15- ನಗರದ ರಿಲೈಯನ್ಸ್ ಸ್ಮಾರ್ಟ್ ಬಜಾರ್, ಅಂಬಿಕಾ ಫರ್ನೀಚರ್ ಹಾಗೂ ಕರೂರು ಇಂಡಸ್ಟ್ರೀಯಲ್ ಏರಿಯಾದ ಶಾಕೀರಾ ಗಾರ್ಮೆಂಟ್ಸ್‌ನಲ್ಲಿ ಇಂದು ಹಮ್ಮಿಕೊಂಡಿದ್ದ ಸದಸ್ಯತ್ವ ಅಭಿಯಾನದಲ್ಲಿ ಲೋಕಸಭಾ ಕ್ಷೇತ್ರದ ಮುಖಂಡರಾದ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಭಾಗವಹಿಸಿ, ಮೋದಿಜೀ ಸರ್ಕಾರ ಕಳೆದ 10 ವರ್ಷಗಳಿಂದ ಮಹಿಳೆಯರಿಗಾಗಿ ಜಾರಿಗೆ ತಂದಿರುವ ಯೋಜನೆಯ ಬಗ್ಗೆ ಮಾತನಾಡಿ ಹೆಚ್ಚು ಸದಸ್ಯತ್ವ ಮಾಡಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಮುಖಂಡರಾದ ಗೌತಮ್ ಜೈನ್, ನಜೀರ್ ಸಾಬ್, ಟಿಪ್ಪು ಸಾಬ್, ಬಿಜೆಪಿ ಮಹಿಳಾ ಮೋರ್ಚಾ ಮುಖಂಡರಾದ ಪುಷ್ಪ ವಾಲಿ, ನೀತು ಭಂಡಾರಿ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು.

### ಓದುಗರ ಪತ್ರ

## ವೇಗದ ನಿಯಂತ್ರಣಕ್ಕಾಗಿ ಹಂಪ್ಸ್ ನಿರ್ಮಿಸಿ



ಮಾನ್ಯರೇ,

ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯ 9ನೇ ಅಡ್ಡ ರಸ್ತೆ ಡಾಂಬರ್ ರಸ್ತೆ ಆಗಿದ್ದರಿಂದ ವಾಹನ ಸವಾರರು ಆಂಜನೇಯ ಬಡಾವಣೆ ಹಾಗೂ ಬಿಐಇಟಿ ರಸ್ತೆಯಿಂದ ರಭಸವಾಗಿ ಸಂಚರಿಸುತ್ತಿದ್ದರಿಂದ ಇಲ್ಲಿನ ನಿವಾಸಿಗಳು ತೊಂದರೆಗೀಡಾಗಿದ್ದಾರೆ.

ವೇಗವಾಗಿ ಸಂಚರಿಸುವ ವಾಹನ ಸವಾರರಿಂದ ವೃದ್ಧರು, ಶಾಲಾ-ಕಾಲೇಜಿನ ಮಕ್ಕಳು ಹಾಗೂ ಮಹಿಳೆಯರಿಗೆ ತೀವ್ರ ತೊಂದರೆ ಆಗುತ್ತಿದೆ ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ರಸ್ತೆಗೆ ಸ್ಪೀಡ್ ಬ್ರೇಕರ್ (ಹಂಪ್ಸ್) ಹಾಕಿ ಸ್ಥಳೀಯರ ಸಮಸ್ಯೆಗೆ ಸ್ಪಂದಿಸಿ.

**- ರಘುನಾಥರಾವ್ ತಾಪ್ಸೆ,** ನಿವೃತ್ತ ಬ್ಯಾಂಕ್ ಅಧಿಕಾರಿ.

# ಹುಬ್ಬಳ್ಳಿ ಗಲಭೆ ಕೇಸ್ ರದ್ದು ಖಂಡನೀಯ



ದಾವಣಗೆರೆ, ಅ.15- ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿ ಗಲಭೆ ಸೃಷ್ಟಿಸಿದ್ದ ದೇಶ ದ್ರೋಹಿಗಳ ಮೇಲಿನ ಪ್ರಕರಣವನ್ನು ಹಿಂಪಡೆದಿರುವುದು ಖಂಡನೀಯ ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಲಭೆಕೋರರ ಪ್ರಕರಣದ ಬಗ್ಗೆ ಎನ್‌ಐಎ ಇಲಾಖೆ ತನಿಖೆ ನಡೆಸುತ್ತಿದ್ದರೂ ಸರ್ಕಾರ ತೆಗೆದುಕೊಂಡ ನಿರ್ಣಯ ಸರಿಯಲ್ಲ ಎಂದು ದೂರಿದರು.

ಸರ್ಕಾರವು ಕನ್ನಡಪರ ಸಂಘಟನೆ, ದೇಶ ಭಕ್ತ ಸಂಸ್ಥೆಗಳು ಹಾಗೂ ರೈತ ಸಂಘಟನೆ ಹೋರಾಟಗಾರರ ಮೇಲಿನ ಮೊಕದ್ದಮೆಗಳನ್ನು ರದ್ದುಗೊಳಿಸುವ ಕಾರ್ಯ ಮಾಡಬೇಕೇ ಹೊರತು ಗಲಭೆಕೋರರ ಮೊಕದ್ದಮೆ ಹಿಂಪಡೆಯಬಾರದು ಎಂದರು.

ಬಿಜೆಪಿಯು ಅಲ್ಪ ಸಂಖ್ಯಾತರ ವಿರೋಧಿಯ, ದೇಶ ಭಕ್ತ ಸಂಸ್ಥೆಗಳ ಪರವಿದೆ. ಹಾಗಾಗಿ ದೇಶ ವಿರೋಧಿಗಳು ಮತ್ತು ಭಯೋತ್ಪಾದಕರ ವಿರುದ್ಧ ನಾವು ತೊಡೆ ತಟ್ಟಿ ಮಾತನಾಡುತ್ತೇವೆ ಎಂದರು.

ಪ್ರಿಯಾಂಕ್ ಖರ್ಗೆ ರಾಜ್ಯದಲ್ಲಿ ಸೂಪರ್ ಸಿಎಂ ಆಗಿ ವರ್ತನೆ ಮಾಡುತ್ತಿದ್ದಾರೆ. ಟ್ರಸ್ಟಿಗೆ ಕಾನೂನು ಪ್ರಕಾರ 5 ಎಕರೆ ಭೂಮಿ ನೀಡಿರುವುದಾಗಿ ತಿಳಿಸಿದ ಮೇಲೆ, ಆ ಜಮೀನನ್ನು ಯಾಕೆ ಹಿಂದಿರುಗಿಸಿದ್ದಾರೆ. ತಪ್ಪೇ ಮಾಡಿರದಿದ್ದರೇ ಜಮೀನು ಯಾಕೆ ವಾಪಸ್ ಮಾಡಬೇಕಿತ್ತು ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷದಲ್ಲಿ ಒಳ ಜಗಳ ಹಾಗೂ ಗೊಂದಲವಿದ್ದ ಕಾರಣ ನೂರಕ್ಕೆ ನೂರರಷ್ಟು ಕ್ಷಿಪ್ರಕ್ರಾಂತಿ ಆಗಲಿದೆ. ಪಕ್ಷದಲ್ಲಿ ಹಾಗೇನಾದರೂ ಆದಲ್ಲಿ ಮುಖ್ಯಮಂತ್ರಿ ಆಗಬೇಕು ಎಂಬ ಹಗಲುಗನಸು ಕಂಡ ಅವರು, ಭೂಮಿ ವಾಪಸ್ ನೀಡಿದ್ದಾರೆ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯ ಅವರಿಗೆ ಕುರ್ಚಿ ಕಂಟಕ ಬಂದಿದ್ದರಿಂದ ಜಾತಿ ಜನ ಗಣತಿ ಮುಂದೆ ತರುವ ಮೂಲಕ ವಿಷಯಾಂತರ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅಧಿಕಾರಕ್ಕೆ ಬಂದು ಒಂದೂವರೆ ವರ್ಷಗಳ ಬಳಿಕ ಈ ವಿಚಾರ ಚರ್ಚಿಸುತ್ತಿರುವುದು ಯಾಕೆ? ಅಂದೇ ಮಾಡಬಹುದಿತ್ತಲ್ಲ ಎಂದರು.

ಬಿಜೆಪಿ ಮುಖಂಡ ಮಾಡಾಳ್ ಮಲ್ಲಿಕಾರ್ಜುನ್ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಅಲ್ಪ ಸಂಖ್ಯಾತರ ತುಷ್ಟೀಕರಣ ಮುಗಿಲು ಮುಟ್ಟಿದೆ. ಹುಬ್ಬಳ್ಳಿ ಗಲಭೆಕೋರರ ಮೊಕದ್ದಮೆ ಹಿಂಪಡೆದಿರುವುದು ರಾಜ್ಯದ ಜನರೇ ಖಂಡಿಸುವ ವಿಚಾರವಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರವು ಆಡಳಿತವನ್ನು ಸರಿಯಾದ ರೀತಿಯಲ್ಲಿ ನಡೆಸಬೇಕು. ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಆಗ್ರಹಿಸಿದ ಅವರು, ಈ ಬಗ್ಗೆ ಕಾರ್ಯಕರ್ತರು ಜನ ಬೀದಿಗಿಳಿದು ಅಹೋರಾತ್ರಿ ಧರಣಿ ಮಾಡಲು ತಯಾರಿದ್ದಾರೆ ಎಂದು ತಿಳಿಸಿದರು.

ಈ ವೇಳೆ ರೈತ ಮೋರ್ಚಾದ ಲೋಕಿಕೆರೆ ನಾಗರಾಜ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ವಾಟರ್ ಮಂಜುನಾಥ್, ಚನ್ನಗಿರಿ ಮಲ್ಲಿಕಾರ್ಜುನ್ ಇತರರು ಗೋಷ್ಠಿಯಲ್ಲಿದ್ದರು.

> **ಜಿಲ್ಲೆಯಲ್ಲಿ ಬಿಜೆಪಿ ಯಾರ ಕಪಿಮುಷ್ಟಿಯಲ್ಲೂ ಇಲ್ಲ. ಆ ತರ ಯಾರಾದರು ತಿಳಿದುಕೊಂಡಿದ್ದರೆ ಅದು ಅವರ ಭ್ರಮೆ.**
> **- ಮಾಡಾಳ್ ಮಲ್ಲಿಕಾರ್ಜುನ್.**

> **ಯುಬಿಡಿಟಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶೇ.50ರಷ್ಟು ಸೀಟುಗಳನ್ನು ಖಾಸಗೀಕರಣ ಮಾಡುತ್ತಿರುವುದನ್ನು ತೀವ್ರವಾಗಿ ಖಂಡಿಸುತ್ತೇನೆ.**
> **- ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ.**

## ದಾವಣಗೆರೆ ಬಂದ್‌ಗೆ ಸಕರವೇ ಬೆಂಬಲ

ಯುಬಿಡಿಟಿ ಕಾಲೇಜು ಉಳಿಸಿ, ಶೇ. 50 ಪೇಮೆಂಟ್ ಸೀಟ್ ರದ್ದುಗೊಳಿಸವಂತೆ ಒತ್ತಾಯಿಸಿ ಎಐಡಿಎಸ್‌ಓ ಕರೆ ಕೊಟ್ಟಿರುವ ದಾವಣಗೆರೆ ಬಂದ್‌ಗೆ ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆ ಬೆಂಬಲ ವ್ಯಕ್ತಪಡಿಸಿದೆ ಎಂದು ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಅವಿನಾಶ್ ವಿ. (ಅಭಿ) ತಿಳಿಸಿದ್ದಾರೆ.

## 17 ರಂದು ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ

ದಾವಣಗೆರೆ, ಅ. 15 - ನಗರದ ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಅಧ್ಯಾತ್ಮ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಪ್ರತೀ ತಿಂಗಳ ಹುಣ್ಣಿಮೆಯೆಂದು ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಡೆಸುವ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಶೀಗಿ ಹುಣ್ಣಿಮೆ ಅಂಗವಾಗಿ ನಾಡಿದ್ದು ದಿನಾಂಕ 17 ರ ಗುರುವಾರ ಬೆಳಿಗ್ಗೆ 7 ಕ್ಕೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷ ಡಾ. ರಮೇಶ್ ಪಟೇಲ್ ತಿಳಿಸಿದ್ದಾರೆ. ಕೆ.ಹೆಚ್. ಮಂಜುನಾಥ್ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

| ಭದ್ರಾ ಜಲಾಶಯ | ನೀರಿನ ಮಟ್ಟ : 186, ಒಳ ಹರಿವು : 786 9 ಕ್ಯೂಸೆಕ್ಸ್, ಹೊರ ಹರಿವು : 7869 ಕ್ಯೂಸೆಕ್ಸ್, ಕಳೆದ ವರ್ಷ : 156.8ಅಡಿ |
|---|---|



## ಟ್ರೈನಿ ವೈದ್ಯೆಯ ಹಂತಕನಿಗೆ ಶಿಕ್ಷಿಸುವಂತೆ ಒತ್ತಾಯಿಸಿ ಕಿರಿಯ ವೈದ್ಯರ ಸತ್ಯಾಗ್ರಹ

ದಾವಣಗೆರೆ, ಅ.15- ಕೊಲ್ಕೊತ್ತಾದಲ್ಲಿ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯಲ್ಲಿ ವೈದ್ಯೆಯ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣದಲ್ಲಿ ನ್ಯಾಯ ಒದಗಿಸಬೇಕು ಹಾಗೂ ವೈದ್ಯರಿಗೆ ರಕ್ಷಣೆ ನೀಡಬೇಕೆಂದು ಒತ್ತಾಯಿಸಿ ನಗರದ ಐಎಂಎ ಹಾಲ್ ಮುಂಭಾಗದಲ್ಲಿ ಇಂಡಿಯಾ ಮೆಡಿಕಲ್ ಅಸೋಸಿಯೇಷನ್ ಸಹಯೋಗದಲ್ಲಿ ಕಿರಿಯ ವೈದ್ಯರು ಇಂದು ಉಪವಾಸ ಸತ್ಯಾಗ್ರಹ ನಡೆಸಿದರು.

ಐಎಂಎ ದಾವಣಗೆರೆ ಶಾಖೆಯ ಸದಸ್ಯರು, ಕಿರಿಯ ವೈದ್ಯರ ಒಕ್ಕೂಟ ಹಾಗೂ ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ಮೆಡಿಕಲ್ ಸ್ಟೂಡೆಂಟ್ ನೆಟ್‌ವರ್ಕ್ ಸದಸ್ಯರು ಐ.ಎಂ.ಎ. ಆವರಣದಲ್ಲಿ ನಿರಶನದಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಐಎಂಎ ಅಧ್ಯಕ್ಷ ಡಾ. ಹರ್ಷ ಮಾತನಾಡಿ, ಕೋಲ್ಕೊತ್ತದಲ್ಲಿ ಸುಮಾರು 25 ಜನ ಕಿರಿಯ ವೈದ್ಯರು 9 ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದು, ಕೆಲವರು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಆದ್ದರಿಂದ ಕೂಡಲೇ ಅಲ್ಲಿನ ಸರ್ಕಾರ ಕಿರಿಯ ವೈದ್ಯರ ಬೇಡಿಕೆಗೆ ಕೂಡಲೇ ಸ್ಪಂದಿಸಬೇಕು ಎಂದರು.

ಕಿರಿಯ ವೈದ್ಯ ನಿಶಾಂತ್ ವಿ. ಸಪ್ತಗಿರಿ ಮಾತನಾಡಿ, ಪಶ್ಚಿಮ ಬಂಗಾಳದ ಕರ್ತವ್ಯ ನಿರತ ಅರೆ ವೈದ್ಯೆಯ ಮೇಲೆ ಅತ್ಯಾಚಾರ ಮತ್ತು ಕೊಲೆ ನಡೆದು ಬಹಳ ದಿನ ಕಳೆದರೂ ಅಲ್ಲಿನ ಸರ್ಕಾರ ನ್ಯಾಯ ಒದಗಿಸಿಲ್ಲ ಎಂದು ದೂರಿದರು.

ಕೋಲ್ಕೊತ್ತದಲ್ಲಿ ಕಿರಿಯ ವೈದ್ಯರು ಕೈಗೊಂಡಿದ್ದ ಉಪವಾಸ ಸತ್ಯಾಗ್ರಹದಲ್ಲಿ 4 ಜನ ವೈದ್ಯರು ಐಸಿಯುಗೆ ದಾಖಲಾಗಿದ್ದಾರೆ. ಆದ್ದರಿಂದ ಸರ್ಕಾರ ಕೂಡಲೇ ಅವರ ಬೇಡಿಕೆಗೆ ಸ್ಪಂದಿಸಿ. ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಡಾ. ಗಣೇಶ್, ಡಾ. ಮಹೇಶ್ ಸೇರಿದಂತೆ ಕಿರಿಯ ವೈದ್ಯರು ಮತ್ತು ವೈದ್ಯ ವಿದ್ಯಾರ್ಥಿಗಳಿದ್ದರು.

## ಇಂದಿನ ದಾವಣಗೆರೆ ಬಂದ್‌ಗೆ ಬೆಂಬಲ



ದಾವಣಗೆರೆ, ಅ.15- ನಗರದ ಯುಬಿಡಿಟಿ ಕಾಲೇಜು ಖಾಸಗೀಕರಣ ಹಾಗೂ ಶೇ.50ರಷ್ಟು ಪೇಮೆಂಟ್ ಸೀಟ್ ನಿರ್ಧಾರ ವಿರೋಧಿಸಿ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜು ಉಳಿಸುವ ಸಲುವಾಗಿ ಎಐಡಿಎಸ್‌ಓ ಸಂಘಟನೆಯು ನಾಳೆ ದಿನಾಂಕ 16ರಂದು ಕರೆ ಕೊಟ್ಟಿರುವ ದಾವಣಗೆರೆ ಬಂದ್‌ಗೆ ಬೆಂಬಲ ಇದೆ ಎಂದು ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ತಿಳಿಸಿದ್ದಾರೆ.

ಆರ್ಥಿಕವಾಗಿ ಹಿಂದುಳಿದ, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಬಡವರ ಮಕ್ಕಳ ಪಾಲಿಗೆ ವರದಾನವಾಗಿದ್ದ ಯುಬಿಡಿಟಿ ಕಾಲೇಜು ಉಳಿಸಬೇಕಾದ ಅನಿವಾರ್ಯತೆ ಎಲ್ಲರಿಗೂ ಇದೆ. ರಾಜ್ಯದ ಪ್ರಥಮ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಎಂಬ ಹೆಗ್ಗಳಿಕೆ ಹೊಂದಿದೆ. ಕಳೆದ 73 ವರ್ಷಗಳಲ್ಲಿ ಈ ಕಾಲೇಜಿನಲ್ಲಿ ಓದಿದ ಲಕ್ಷಾಂತರ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಪೂರೈಸಿ ಬದುಕು ಕಟ್ಟಿಕೊಂಡಿದ್ದಾರೆ. ಇಂಥ ಪ್ರತಿಷ್ಠಿತ ಸಂಸ್ಥೆಯಲ್ಲಿ ಶುಲ್ಕ ಹೆಚ್ಚಳ ಮಾಡಿ ಪೇಮೆಂಟ್ ಸೀಟ್ ನೀಡಲು ಮುಂದಾಗಿರುವುದು ದುರದೃಷ್ಟಕರ. ಈ ನಿರ್ಧಾರದಿಂದ ಶೈಕ್ಷಣಿಕ ಅಸಮಾನತೆಯೂ ಹೆಚ್ಚುತ್ತದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

## ಬಂದ್‌ಗೆ ಹೊಲಿಗೆ ಕೆಲಸಗಾರರ ಕ್ಷೇಮಾಭಿವೃದ್ಧಿ ಸಂಘದ ಬೆಂಬಲ

ಯುಬಿಡಿಟಿ ಉಳಿಸಿ ಹೋರಾಟ ಸಮಿತಿ ನೀಡಿರುವ ಇಂದಿನ ದಾವಣಗೆರೆ ಬಂದ್ ಕರೆಗೆ ಬೆಂಬಲ ನೀಡಲಾಗುವುದು ಎಂದು ಕರ್ನಾಟಕ ರಾಜ್ಯ ಹೊಲಿಗೆ ಕೆಲಸಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಜಿ.ಯಲ್ಲಪ್ಪ ತಿಳಿಸಿದ್ದಾರೆ.

ಕಾಲೇಜಿನ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದು ಸಂಘದ ಜಿಲ್ಲಾಧ್ಯಕ್ಷ ಬಾಬುರಾವ್ ಒತ್ತಾಯಿಸಿದ್ದಾರೆ.

## ರಾಣೇಬೆನ್ನೂರು : ನಾಳೆ ವಾಲ್ಮೀಕಿ ಜಯಂತಿ

ರಾಣೇಬೆನ್ನೂರು, ಅ. 15- ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಸ್ಥಳೀಯ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ವತಿಯಿಂದ ನಾಡಿದ್ದು ದಿನಾಂಕ 17 ರಂದು ಗುರುವಾರ ನಗರದ ತಾಲ್ಲೂಕು ಸಭಾ ಭವನದಲ್ಲಿ 'ವಾಲ್ಮೀಕಿ ಜಯಂತಿ' ಆಚರಿಸಲಾಗುವುದು ಎಂದು ಸಮಾಜದ ತಾಲ್ಲೂಕು ಅಧ್ಯಕ್ಷ ಚಂದ್ರಣ್ಣ ಬೇಡರ ತಿಳಿಸಿದ್ದಾರೆ.

## ಬಲವಂತವಾಗಿ ಕಾಲೇಜು, ಅಂಗಡಿ ಮುಂಗಟ್ಟು ಮುಚ್ಚಿಸಿದರೆ ಕಾನೂನು ಕ್ರಮ

ದಾವಣಗೆರೆ, ಅ. 15- ಯುಬಿಡಿಟಿ ಕಾಲೇಜು ಉಳಿಸಲು, ಶೇ. 50 ಪೇಮೆಂಟ್ ಸೀಟ್ ರದ್ದುಪಡಿಸಬೇಕೆಂಬಿತರೇ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಾಳೆ ದಿನಾಂಕ 16 ರಂದು ಕರೆ ಕೊಟ್ಟಿರುವ ಬಂದ್ ಸಮಯದಲ್ಲಿ ಬಲವಂತವಾಗಿ ಶಾಲಾ-ಕಾಲೇಜುಗಳು, ಅಂಗಡಿ ಮುಂಗಟ್ಟುಗಳು, ಖಾಸಗಿ, ಸರ್ಕಾರಿ ಸಂಸ್ಥೆಗಳನ್ನು ಮುಚ್ಚಿಸುವಂತಿಲ್ಲ.

ಒಂದು ವೇಳೆ ಬಲವಂತವಾಗಿ ಮುಚ್ಚಿಸಿದರೆ ಕಾನೂನು ಕ್ರಮ ಜರುಗಿಸುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಎಚ್ಚರಿಕೆ ನೀಡಿದ್ದಾರೆ.

ಬಂದ್ ವೇಳೆ ಸಾರ್ವಜನಿಕ ಆಸ್ತಿ ಪಾಸ್ತಿ ನಾಶ ಮಾಡುವಂತಿಲ್ಲ. ರಸ್ತೆ ತಡೆ, ಸಾರ್ವಜನಿಕ ಸಂಚಾರಕ್ಕೆ ಅಡ್ಡಿಪಡಿಸುವುದನ್ನು ಮಾಡುವಂತಿಲ್ಲ. ಟಯರ್ ಗೆ ಬೆಂಕಿ ಹಚ್ಚುವುದು, ಪ್ರತಿಕೃತಿ ದಹಿಸುವಂತಿಲ್ಲ. ಬಂದ್ ಹೆಸರಿನಲ್ಲಿ ಕಾನೂನು ಕೈಗೆ ತೆಗೆದುಕೊಂಡರೆ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವುದು, ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುವಂತಹ ಪೋಸ್ಟ್‌ಗಳನ್ನು ಹಾಕುವುದು, ಶೇರ್ ಮಾಡುವುದು ಕಂಡು ಬಂದರೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಶಾಂತಿಯುತ ಹಾಗೂ ಸೌಹಾರ್ದಯುತ ಪ್ರತಿಭಟನೆ ಮಾಡಬೇಕು. ಬಂದ್ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಸಶಸ್ತ್ರ ತುಕಡಿಗಳನ್ನು ನಿಯೋಜಿಸಿದೆ ಎಂದು ತಿಳಿಸಿದ್ದಾರೆ.

WANTED/ಕೆಲಸಕ್ಕೆ ಬೇಕಾಗಿದ್ದಾರೆ
Wholesale ಔಷಧಿ ಅಂಗಡಿಗೆ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
Qualification : (SSSLC, PUC) English ಓದಲು ಬರಬೇಕು
Address : ಎ.ಕೆ. ಫಾರ್ಮ, ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.
ಫೋ : 88678 56784, 99643 75596

# ನಗರದಲ್ಲಿ ಕಲ್ಲು ತೂರಾಟ ಪ್ರಕರಣ : ಬಂಧಿತರ ಬಿಡುಗಡೆ

ದಾವಣಗೆರೆ, ಅ.15- ನಗರದ ಬೇತೂರು ರಸ್ತೆಯಲ್ಲಿರುವ ಅರಳಿಮರ ವೃತ್ತ ಮತ್ತು ವೆಂಕಟೇಶ್ವರ ವೃತ್ತದ ಬಳಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದ್ದವರ ಪೈಕಿ 31 ಜನರನ್ನು ಮಂಗಳವಾರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಸತೀಶ್ ಪೂಜಾರಿ ಹಾಗೂ ನೂರ್ ಅಹ್ಮದ್ ಸೇರಿದಂತೆ ಮಂಗಳವಾರ ಬಿಡುಗಡೆಯಾದವರ ಪೈಕಿ 14 ಯುವಕರು ಹಿಂದೂಗಳಾದರೆ, 17 ಜನರು ಮುಸ್ಲಿಂ ಸಮುದಾಯದವರಾಗಿದ್ದಾರೆ.

ಉಳಿದ 8 ಜನರು ಬುಧವಾರ ಬಿಡುಗಡೆಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.ಇದಕ್ಕೂ ಮುನ್ನ ನಾಲ್ಕು ಜನರಿಗೆ ಜಾಮೀನು ದೊರೆತಿತ್ತು.

ಕಳೆದ ಸೆಪ್ಟೆಂಬರ್ 19ರ ಸಂಜೆ ಗಣೇಶನ ವಿಸರ್ಜನಾ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದಿತ್ತು. ಕೂಡಲೇ ಕಾರ್ಯಪ್ರವೃತ್ತ ರಾಗಿದ್ದ ಪೊಲೀಸರು, ಹೆಚ್ಚಿನ ಅನಾಹುತವಾಗುವು ದನ್ನು ತಪ್ಪಿಸುವಲ್ಲಿ ಯಶಸ್ವಿಯಾಗಿದ್ದರು. ರಾತ್ರಿ ಹಾಗೂ ಮರು ದಿನವೇ ಕಲ್ಲು ತೂರಾಟ ನಡೆಸಿದವರನ್ನು ಬಂಧಿಸಿದ್ದ ಪೊಲೀಸರು ಅವರ ಮೇಲೆ ಪ್ರಕರಣ ದಾಖಲಿಸಿದ್ದರು.



# ರಾಜ್ಯ ಕ್ರಿಕೆಟ್ ತಂಡಕ್ಕೆ ನಗರದ ಪಾರ್ಥ ಜಿ. ಜೋಯ್ಸ್ ಆಯ್ಕೆ

ದಾವಣಗೆರೆ, ಅ. 15- ನಾಡಿದ್ದು ದಿನಾಂಕ 17 ರಿಂದ 20ರವರೆಗೆ ಹರಿಯಾಣದ ಸೋನಿಪತ್‌ನಲ್ಲಿ ನಡೆಯಲಿರುವ 19 ವರ್ಷದ ಒಳಗಿನ ರಾಷ್ಟ್ರೀಯ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯ ಕರ್ನಾಟಕ ರಾಜ್ಯ ತಂಡಕ್ಕೆ ನಗರದ ಅಮೃತಾನಂದಮಯಿ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಪಾರ್ಥ ಜಿ. ಜೋಯ್ಸ್ ಆಯ್ಕೆಯಾಗಿದ್ದಾರೆ. ಪಾರ್ಥ, ದಾವಣಗೆರೆ ಕ್ರಿಕೆಟ್ ಕ್ಲಬ್‌ನ ತರಬೇತುದಾರ ಕೆ.ಎನ್. ಗೋಪಾಲಕೃಷ್ಣ ಹಾಗೂ ಖೋ-ಖೋ ರಾಷ್ಟ್ರೀಯ ಕ್ರೀಡಾಪಟು - ನಮನ ಅಕಾಡೆಮಿಯ ಶ್ರೀಮತಿ ಮಾಧವಿ ಗೋಪಾಲಕೃಷ್ಣ ದಂಪತಿ ಪುತ್ರ.

## ನೀರು ಕುದಿಸಿ, ಆರಿಸಿ ಕುಡಿಯಲು ಸಲಹೆ

ಹರಿಹರ, ಅ.15- ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆಗುತ್ತಿರುವ ಪ್ರಯುಕ್ತ ತುಂಗಭದ್ರಾ ನದಿಗೆ ಮಣ್ಣು ಮಿಶ್ರಿತ ಕೆಸರು ನೀರು ಹರಿದು ಬರುತ್ತದೆ. ನದಿಯಿಂದ ಹರಿಹರ ನಗರಕ್ಕೆ ನೀರು ಪೂರೈಸುತ್ತಿರುವ ಕಾರಣ ಸಾರ್ವಜನಿಕರು ನೀರನ್ನು ನೇರವಾಗಿ ಕುಡಿಯದೇ, ಕುದಿಸಿ ಆರಿಸಿದ ನೀರನ್ನು ಕುಡಿಯಬೇಕೆಂದು ನಗರಸಭೆ ಪೌರಯುಕ್ತರು ತಿಳಿಸಿದ್ದಾರೆ.

# ಮುಂಗಾರು ಸಂಪೂರ್ಣ ನಿರ್ಗಮನ




ನವದೆಹಲಿ, ಅ. 15 - ಮುಂಗಾರು ಮಾರುತಗಳು ಈಗ ದೇಶದಿಂದ ಸಂಪೂರ್ಣ ನಿರ್ಗಮಿಸಿವೆ. ಆಗ್ನೇಯ ಭಾಗದಲ್ಲಿ ಈಗ ಹಿಂಗಾರು ಮಾರುತಗಳು ಸಕ್ರಿಯವಾಗಿವೆ. ಈ ವರ್ಷ ಮೇ 30ರಂದು ಕೇರಳಕ್ಕೆ ಮುಂಗಾರು ಮಾರುತಗಳು ತಲುಪಿದ್ದವು. ಜುಲೈ 2ರ ವೇಳೆಗೆ ಇಡೀ ದೇಶವನ್ನು ಆವರಿಸಿದ್ದವು. ಸೆಪ್ಟೆಂಬರ್ 23ರಿಂದ ದೇಶದಿಂದ ಮುಂಗಾರು ಹಿಂದೆ ಸರಿಯುವುದು ಆರಂಭವಾಗಿತ್ತು. ದೇಶದಲ್ಲಿ ಮುಂಗಾರು ಅವಧಿಯಲ್ಲಿ 934.8 ಮಿ.ಮೀ. ಮಳೆಯಾಗಿದೆ. ವಾಡಿಕೆ ಮಳೆ ಪ್ರಮಾಣ 868.6 ಮಿ.ಮೀ. ಆಗಿದೆ. 2020ರ ನಂತರ ದೇಶದಲ್ಲಿ ಈ ವರ್ಷ ಅತಿ ಹೆಚ್ಚು ಮಳೆಯಾಗಿದೆ. ಈ ವರ್ಷ ವಾಡಿಕೆಗಿಂತ ಶೇ.8ರಷ್ಟು ಹೆಚ್ಚು ಮಳೆಯಾಗಿದೆ. ಆದರೂ, ಈಶಾನ್ಯ ಭಾಗದಲ್ಲಿ ಮಳೆ ಪ್ರಮಾಣ ವಾಡಿಕೆಗಿಂತ ಶೇ.14ರಷ್ಟು ಕಡಿಮೆ ಇದೆ.












KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas